9. ಪ್ರಕಟಣೆ :

ಅಧ್ಯಕ್ಷರು : ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲೆ ಚರ್ಚೆಗೆ ಸಿಗುವ ಸಮಯದ ಅಂದಾಜು 10 ಗಂಟೆಗಳೆಂದು ನಿಗದಿಪಡಿಸಿದೆ. ವಿವಿಧ ಪಕ್ಷಗಳಿಗೆ ದೊರೆಯುವ ಅಂದಾಜು ಸಮಯ: ಭಾರತೀಯ ಜನತಾ ಪಕ್ಷಕ್ಕೆ ಸರ್ಕಾರದ ಉತ್ತರವೂ ಸೇರಿದಂತೆ 5 ಗಂಟೆಗಳು, ಕಾಂಗ್ರೆಸ್ 3.30 ಗಂಟೆಗಳು, ಜೆ.ಡಿ.ಎಸ್. 1.30 ಗಂಟೆ. ಒಟ್ಟು ಹತ್ತು ಗಂಟೆಗಳು. ಈ ದಿವಸ ಸದನವನ್ನು ಸಂಜೆ 7 ಗಂಟೆಯವರೆಗೆ ನಡೆಸಲಾಗುವುದು. ನಾಳೆ ಬೆಳಿಗ್ಗೆ 10 ಗಂಟೆಯಿಂದ ಚರ್ಚೆಯನ್ನು ಆರಂಭಿಸಿ ಸಂಜೆ 6 ಗಂಟೆಗೆ ಸರ್ಕಾರದಿಂದ ಉತ್ತರ. ಎಲ್ಲರೂ ಸಹಕರಿಸಬೇಕೆಂದು ಕೇಳುತ್ತೇನೆ.

ಶ್ರೀ ಎಂ.ಟಿ. ಕೃಷ್ಣಪ್ಪ : ನಮಗೆ 1.30 ಗಂಟೆ ಸಾಕಾಗುವುದಿಲ್ಲ. ದಯಮಾಡಿ ಹೆಚ್ಚುಮಾಡಿ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ರಾಜುಗೌಡರು ಮಾತನಾಡುತ್ತಾ ನಮಗೆ ವುಟ್‌ಬೈಸ್ ಹೊಡೆಯುತ್ತಾರೆಂದು ಹೇಳಿದರು. ನಮಗೆ ವುಟ್‌ಬೈಸ್ ಹೊಡೆಯಲು ಒಂದೂವರೆ ಗಂಟೆ ಸಾಕಾಗುವುದಿಲ್ಲ. ನಮಗೆ ಜಾಸ್ತಿ ಅವಕಾಶ ಮಾಡಿಕೊಡಿ. ಆಡಳಿತ ಪಕ್ಷದವರಿಗೆ ಏಕೆ ಅಷ್ಟೊಂದು ಅವಕಾಶ?

ಅಧ್ಯಕ್ಷರು : ಅವರು ಮಾತನಾಡಲಿ. ನೀವು ಅವರಿಗೆ ಮಾತನಾಡಲೂ ಬಿಡುವುದಿಲ್ಲ. ಹೀಗೇ ಸಮಯ ಹಾಳಾಗುತ್ತಿದ್ದರೆ ಹೇಗೆ? ಈಗ ನಾರಾಯಣಸ್ವಾಮಿಯವರು ಮಾತನಾಡಲಿ.

10. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ (ಮುಂದು) :

ಶ್ರೀ ಎ. ನಾರಾಯಣಸ್ವಾಮಿ (ಆನೇಕಲ್) : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಬಗ್ಗೆ ಅನುಮೋದಿಸಲು ಅವಕಾಶ ನೀಡಿದ್ದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಸದನದ ಬಗ್ಗೆ ಕರ್ನಾಟಕದ 5 ಕೋಟಿ ಜನ ಬಹಳ ವಿಶ್ವಾಸವನ್ನು ಗೌರವವನ್ನು ನೀಡಿ ಇದನ್ನು 'ಕರ್ನಾಟಕದ ದೇಗುಲ'ವೆಂದು ಜನ ಅಪೇಕ್ಷೆ

ಪಟ್ಟಿದ್ದಾರೆ. ಸ್ವಾತಂತ್ರ್ಯದ ಇತಿಹಾಸದಲ್ಲಿ ಶಾಸಕಾಂಗಕ್ಕೆ ಬಹಳ ಗೌರವ ಇದೆ. ಶಾಸಕರ ಬಗ್ಗೆ ಬಹಳಷ್ಟು ಗೌರವ ಇದೆ. ಈ ಸಮಾಜದ ಅನೇಕ ನಾಗರೀಕರ ಮಾನವನ್ನು ಕಾಪಾಡುತ್ತಾನೆ, ಕಾನೂನನ್ನು ಎತ್ತಿ ಹಿಡಿಯುತ್ತಾನೆ, ಈ ಸಮಾಜದಲ್ಲಿ ಎಲ್ಲಾ ರೀತಿಗಳಲ್ಲಿ ಗೌರವವನ್ನು ತಂದು ಕೊಡುತ್ತಾನೆಂದು ಅನೇಕ ನಾಗರೀಕರಲ್ಲಿ ಭಾವನೆ ಇದೆ. ನಾನು ನಾಲ್ಕು ಸಲ ಶಾಸಕನಾಗಿ ಗೆದ್ದು ಬಂದಿದ್ದೇನೆ, ಈ ಸದನದಲ್ಲಿದ್ದೇನೆ. ಈ ಸದನದ ಬಗ್ಗೆ ಅಪಾರವಾದ ವಿಶ್ವಾಸವನ್ನಿಟ್ಟುಕೊಂಡು ಈ ಸಭೆಗೆ ನಾನು ಬಂದಿದ್ದೇನೆ. ಈ ರಾಜ್ಯದ ದಲಿತರ, ರೈತರ ಸಮಸ್ಯೆ ಬಂದಾಗ ...

(ಈ ಹಂತದಲ್ಲಿ ಶ್ರೀ ಎನ್. ಯೋಗೀಶ್ ಭಟ್‌ರವರು ಪೀಠವನ್ನು ಅಲಂಕರಿಸಿದರು)

ಶ್ರೀ ಟಿ.ಬಿ. ಜಯಚಂದ್ರ : ನೀವು ಬಹಳ ವಿಶ್ವಾಸವನ್ನಿಟ್ಟುಕೊಂಡು ಬಂದಿದ್ದೀರಿ, ಅದು ಸರಿ. ನೀವು ಮಂತ್ರಿಯಾಗಲಿಲ್ಲ ಎಂದಾಗ ಬೆಂಕಿ ಬಿದ್ದಿತಲ್ಲಾ, ಅದು ಏಕೆ ?

ಶ್ರೀ ಎ. ನಾರಾಯಣಸ್ವಾಮಿ : ಮಂತ್ರಿ ಸ್ಥಾನ ವ್ಯಕ್ತಿಯನ್ನು ಹುಡುಕಿಕೊಂಡು ಬರಬೇಕು. ಮಂತ್ರಿ ಸ್ಥಾನವನ್ನು ವ್ಯಕ್ತಿ ಹುಡುಕಿಕೊಂಡು ಹೋಗಬಾರದು. ಯಾವುದೇ ಸರ್ಕಾರ, ಸಂಸ್ಥೆ ಅಥವಾ ಪಕ್ಷ ಆ ವ್ಯಕ್ತಿಯನ್ನು ಗುರುತಿಸಬೇಕು. ಮನೆ ಬಾಗಿಲನ್ನು ಕಾಯಬಾರದು. ಅದು ವೈಯಕ್ತಿಯ ಲಕ್ಷಣಗಳನ್ನು, ಗೌರವಗಳನ್ನು ಹೆಚ್ಚಿಸುತ್ತದೆ ಎನ್ನುವುದು ನನ್ನ ಭಾವನೆ.

ಶ್ರೀ ಟಿ.ಬಿ. ಜಯಚಂದ್ರ : ಈ ಕೂಗು ಮಾನ್ಯ ಯಡಿಯೂರಪ್ಪನವರಿಗೆ ಕೇಳಬೇಕು. ಮಾನ್ಯ ಸುರೇಶ್‌ಕುಮಾರ್‌ರವರೆ, ನಾವೂ ಸಹ ನಿಮ್ಮನ್ನು request ಮಾಡಿಕೊಳ್ಳುತ್ತೇವೆ. ನೀವು ಅವರ ಅಹವಾಲು ಕೇಳಬೇಕು.

ಶ್ರೀ ಎ. ನಾರಾಯಣಸ್ವಾಮಿ : ಸಮಾಜ, ಸರ್ಕಾರ ಮತ್ತು ನನ್ನನ್ನು ಬೆಳೆಸಿದಂತಹ ಪಕ್ಷ ಯಾವ ಸಮಯದಲ್ಲಿ ಗುರುತಿಸಬೇಕೋ, ಆ ಸಮಯದಲ್ಲಿ ಗುರುತಿಸುತ್ತದೆ.

5.20 ಪಿ.ಎಂ.

ಶ್ರೀ ಸಿ.ಸಿ. ಪಾಟೀಲ್ : ಅವರಿಗೆ ಮುಟ್ಟಿಸುವಂತಹ ವ್ಯವಸ್ಥೆಯನ್ನು ನಾವು ಮಾಡುತ್ತೇವೆ.

ಶ್ರೀ ಎ. ನಾರಾಯಣಸ್ವಾಮಿ : ನನ್ನ ಪಕ್ಷದಲ್ಲಿ ನನಗೇನು ಸ್ಥಾನ ಎನ್ನುವುದಕ್ಕಿಂತ ನನ್ನ ಸಮಾಜಕ್ಕೆ ಏನಾಗುತ್ತಿದೆ ? ಈ ರಾಜ್ಯಕ್ಕೆ ಏನಾಗುತ್ತಿದೆ? ಎಂಬ ಚಿಂತನೆ ವ್ಯಕ್ತಿಯಲ್ಲಿರಬೇಕು, ಶಾಸಕನಲ್ಲಿರಬೇಕು ಎಂಬುದು ನನ್ನ ಭಾವನೆ. ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಸದನಕ್ಕೆ ಬೈ ಎಲೆಕ್ಷನ್‌ನಲ್ಲಿ ಬಂದಾಗ, ನಾನು ರಾಜಕಾರಣಿಯಲ್ಲ. ಒಬ್ಬ ಸಮಾಜ ಸೇವಕನಾಗಿದ್ದೆ. ರಾಜ್ಯ ಯಾವುದೇ ಮೂಲೆಯ ಸಮಸ್ಯೆ ಇಲ್ಲಿ ಪ್ರಸ್ತಾಪವಾದಾಗ, ಮಾಧ್ಯಮದವರು ಮತ್ತು ಈ ಸದನದಲ್ಲಿದ್ದ ಅಧಿಕಾರಿಗಳು ಅದನ್ನು ಗುರುತು ಹಾಕಿಕೊಂಡು ಚರ್ಚೆ ಮಾಡುತ್ತಿದ್ದರು. ಆ ಚರ್ಚೆ ಸಮಯದಲ್ಲಿ ಸರ್ಕಾರ ಪರಿಹಾರ ಕೊಡದೆ ಹೋದರೆ, ವಿರೋಧ ಪಕ್ಷದವರು ಆ ಸಮಸ್ಯೆಯನ್ನು ಅಲ್ಲೇ ಬಿಡುತ್ತಿರಲಿಲ್ಲ. ಪರಿಹಾರವನ್ನು ಕಂಡು ಹಿಡಿದುಕೊಳ್ಳುತ್ತಿದ್ದರು. ಯಾವುದೇ ಅಧಿಕಾರಿ ಭ್ರಷ್ಟಾಚಾರದಲ್ಲಿ ತೊಡಗಿದಾಗ, ಸರ್ಕಾರದ ನಿಲುವುಗಳನ್ನು ಪ್ರತಿಪಾದನೆ ಮಾಡದಿದ್ದಾಗ, ಸರ್ಕಾರದ ಯೋಜನೆಗಳನ್ನು ಜಾರಿ ಮಾಡದಿದ್ದಾಗ, ಗಂಭೀರವಾಗಿ ಆ ಬಗ್ಗೆ ಚರ್ಚೆ ಮಾಡಿದಾಗ ಪರಿಹಾರ ಸಿಗುತ್ತಿತ್ತು. ಆ ಬಗ್ಗೆ ದಾಖಲೆ ಸಮೇತ, ಅಂಕಿ ಅಂಶಗಳ ಸಮೇತ, ಆ ಭಾಗದ ಶಾಸಕ ಚರ್ಚೆ ಮಾಡುತ್ತಿದ್ದ. ಅಧಿಕಾರಿಗಳು ಆ subject ಬರುತ್ತದೆಂದು ಹೇಳಿದರೆ, ಬಹಶಃ ಆ ಅಧಿಕಾರಿ ನಿದ್ದೆ ಹೋಗುತ್ತಿರಲಿಲ್ಲ. ನನ್ನ ಬಗ್ಗೆ ಎಲ್ಲಿ ಚರ್ಚೆಯಾಗುತ್ತದೋ, ಎಲ್ಲಿ ಸಸ್ಪೆಂಡ್ ಆಗುತ್ತೇನೋ, ಎಲ್ಲಿ ಕ್ರಮ ತೆಗೆದುಕೊಳ್ಳುತ್ತಾರೋ, ಎಲ್ಲಿ documentation ಆಗುತ್ತದೋ ಎಂಬ ಆತಂಕದಲ್ಲಿ ಇರುತ್ತದ್ದ. ಇವತ್ತು ಆ ಪರಿಸ್ಥಿತಿ ಇಲ್ಲ. ಸಮಸ್ಯೆ ಬಗ್ಗೆ ಗಂಭೀರವಾಗಿ ಚರ್ಚೆ ಮಾಡಬೇಕು, ಪರಿಹಾರ ಹುಡುಕಬೇಕು. ಅಧಿಕಾರಿಗಳು ಯೋಜನೆ ಜಾರಿ ಮಾಡುವುದಕ್ಕೆ, ಸರ್ಕಾರವನ್ನು ಒಂದು ದಾರಿಗೆ ತರಬೇಕು, ಸರ್ಕಾರದ ಹಿಡಿತ ಇರಬೇಕು ಎನ್ನುವಂತಹ ಭಾವನೆಗಳನ್ನು ಹೊಂದಿರುವಾಗ ಸದನದಲ್ಲಿ ಚರ್ಚೆ ಅವಶ್ಯಕತೆ ಇದೆಯೇ ?

ಎಂಬ ಪ್ರಶ್ನೆ ಬರುತ್ತದೆ. ಬಹುತೇಕ ಜನರು ನಮ್ಮನ್ನು ನೋಡುತ್ತಿರುತ್ತಾರೆ. ನಾವು ಬಜೆಟ್‌ನಲ್ಲಿ ಹೇಳುತ್ತೇವೆ, ರಾಜ್ಯಪಾಲರ ಭಾಷಣದಲ್ಲಿ ಹೇಳುತ್ತೇವೆ. ಆದರೆ ನಮ್ಮ commitment ಏನು ? ಈ ಸದನದ ಜವಾಬ್ದಾರಿ ಏನು ? ಅನೇಕ ವಿಚಾರಗಳು ಹೊರಗಡೆ ಚರ್ಚೆಯಾಗುತ್ತವೆ. ಇತ್ತೀಚೆಗೆ ಭ್ರಷ್ಟಾಚಾರದ ಚರ್ಚೆಗಳು ಬಹಳಷ್ಟು ಆಗುತ್ತಿವೆ. ಶಾಸಕ ಎಂದರೆ ಭ್ರಷ್ಟ ಎನ್ನುವಂತಾಗಿದೆ. ಇವರೇನೋ ವಿಧಾನ ಸೌಧಕ್ಕೆ ಲೂಟಿ ಹೊಡೆಯುವುದಕ್ಕೆ ಬರುತ್ತಾರೆ ಎನ್ನುವಂತಹ ಭಾವನೆ ಈ ಸಮಾಜದಲ್ಲಿದೆ. ಈ ರೀತಿ ಜನ ಚರ್ಚೆ ಮಾಡುವುದಕ್ಕೆ ನಾವೇ ಅವಕಾಶ ಮಾಡಿಕೊಟ್ಟಿದ್ದೇವೆ. ಯಾವುದೇ ನಾಯಕ ಮಾತನಾಡಲಿ, ಯಾವುದೇ ಒಂದು lay-out ಮಾಡಿದರೂ, ಬಡಾವಣೆ ಮಾಡಿದರೂ, ರಸ್ತೆ ಮಾಡಿದರೂ, acquisition ಆಯಿತು ಎಂದರೆ ಇದರಲ್ಲೇನೋ ಭ್ರಷ್ಟಾಚಾರ ಇದೆ ಎನ್ನುತ್ತಾರೆ. ಈ ಭಾವನೆ ಮೂಡಿಸುತ್ತಿರುವವರು ಯಾರು ? ಯಾರೋ ಒಬ್ಬ ಸಾಮಾನ್ಯ ನಾಗರೀಕ ಸಮಾಜದಲ್ಲಿ ಈ ಭಾವನೆಯನ್ನು ಮೂಡಿಸುತ್ತಿಲ್ಲ. ಜವಾಬ್ದಾರಿಯುತ ವ್ಯಕ್ತಿಗಳು, ಈ ರಾಜ್ಯಕ್ಕೆ, ಈ ಸಮಾಜಕ್ಕೆ ಸಂದೇಶವನ್ನು ನೀಡುವ ವ್ಯಕ್ತಿಗಳು ಭ್ರಷ್ಟಾಚಾರದ ಬಗ್ಗೆ ಚರ್ಚೆಯನ್ನು ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇದನ್ನು 'ಹೌದು' ಎಂದು ನಮ್ಮ ಸಮಾಜ, ನಾಗರೀಕ ಸಮಾಜ ಇರಬಹುದು ಅಥವಾ ವಿದ್ಯೆ ಇಲ್ಲದ ಸಮಾಜ ಇರಬಹುದು, ರೈತ ಇರಬಹುದು, ಒಪ್ಪಿಕೊಳ್ಳುತ್ತಿದ್ದಾರೆ. ಅವನು ಯೋಚನೆ ಮಾಡುತ್ತಾನೆ. ವಿಧಾನ ಸೌಧದಲ್ಲಿ ಯಾರ ಆಸ್ತಿ ಲೂಟಿ ಮಾಡಿದರು ಎಂದಷ್ಟೇ ಚರ್ಚೆಯಾಗುವುದು ಎಂದು ಅಂದುಕೊಳ್ಳುತ್ತಾರೆ. ಮಾನ್ಯ ಅಧ್ಯಕ್ಷರೆ, ಈ ಸದನಕ್ಕೆ, ಈ ಶಾಸಕ ಸ್ಥಾನಕ್ಕೆ ಗೌರವವಿಲ್ಲ ಎನ್ನುವುದಾದರೆ, ಚುನಾವಣೆಯಲ್ಲಿ ಶಾಸಕ ಸ್ಥಾನಕ್ಕೆ ಅಭ್ಯರ್ಥಿಗಳಾಗಿ contest ಮಾಡಿ ಗೆದ್ದು ಬರುವ ಅವಶ್ಯಕತೆಯಿಲ್ಲ. ನಾವು ಎಲ್ಲೋ ಹೋಗುತ್ತಿದ್ದಾಗ, 'ಶಾಸಕ' ಎಂದು ಹೇಳಿದರೆ, ಭ್ರಷ್ಟಾಚಾರದ ಬಗ್ಗೆ ಚರ್ಚೆ ಮಾಡುತ್ತಾರೆ. ಖಂಡಿತ, ನಾವೆಲ್ಲಾ ಜವಾಬ್ದಾರಿಯಿಂದ ಇರಬೇಕು. ನಮ್ಮ ಗೌರವಗಳನ್ನು ನಾವು ಎತ್ತಿ ಹಿಡಿಯುವುದಕ್ಕೆ, ನಮ್ಮ ನಡವಳಿಕೆಗಳನ್ನು ಬದಲಾವಣೆ ಮಾಡಿಕೊಳ್ಳಬೇಕು. ನಾವು pressಗೆ ಹೋಗುವಾಗ ಗಂಭೀರವಾಗಿ ನಾವು

pressನಲ್ಲಿ ಹೇಳಬೇಕು. ಯಾವುದೇ ವ್ಯಕ್ತಿ ಮಾತನಾಡಿದಾಗ, ಅದರಲ್ಲಿ ಸತ್ಯ ಇರುತ್ತದೆ ಎಂಬ ವಿಚಾರ ಸಮಾಜಕ್ಕೆ ಬಂದಾಗ ಮಾತ್ರ ಈ ಸದನದಲ್ಲಿ ಗೌರವ ಇರುತ್ತದೆ. ಇದನ್ನು ನಾವು ಮೈಗೂಡಿಸಿಕೊಳ್ಳದಿರುವುದು ಸರಿಯಲ್ಲ. ನಾವು ಚುನಾವಣೆಯಲ್ಲಿ ಯುದ್ಧ ಮಾಡಿ, ನಮ್ಮ ಸಾಧನೆಗಳನ್ನು ಅಲ್ಲಿ ಹೇಳಿ, ಗೆದ್ದು ಬಂದು, ಇಲ್ಲಿ ಯಾವುದೇ ವಿಚಾರ ಚರ್ಚೆ ಮಾಡದೆ, ಅಲ್ಲಿ ಮತದಾರನಿಗೆ ಸಹ ಸಿಗದಿರುವುದು ಸರಿಯಲ್ಲ. ಇದರಿಂದ ಅಧಿಕಾರಿಗಳು ಯೋಜನೆ ಜಾರಿ ಮಾಡುವುದಕ್ಕಾಗುವುದಿಲ್ಲ. ಇಲ್ಲಿ ನಮ್ಮ ಸಮಸ್ಯೆಗೆ ಪರಿಹಾರವೂ ಸಿಗುವುದಿಲ್ಲ. ಈ ಸದನದಲ್ಲಿ ಸಮಯವನ್ನು ಏಕೆ ವ್ಯರ್ಥ ಮಾಡಬೇಕೆಂದು ಯೋಚನೆ ಮಾಡಬೇಕಾಗುತ್ತದೆ. ಮೊದಲು ಬಹಳಷ್ಟು ಸಂಸದೀಯ ಪಟುಗಳಿದ್ದರು. ಯಾವುದೇ ವಿಚಾರವನ್ನು ಚೆನ್ನಾಗಿ ಮಂಡಿಸುತ್ತಿದ್ದರು. ಅಂಕಿ ಅಂಶಗಳು ಇಲ್ಲದೆ ಮಾತನಾಡುತ್ತಿರಲಿಲ್ಲ. ಈ ಯೋಜನೆ ಇಂತಹ ವರ್ಷದಲ್ಲಿ ಪ್ರಾರಂಭವಾಯಿತು, ನೀವು ಈಗ ಮುಖ್ಯಮಂತ್ರಿಯಾಗಿದ್ದೀರಿ, ಈಗ ನಿಮ್ಮ ಸರ್ಕಾರ ಬಂದಿದೆ, ಈ ಯೋಜನೆಗೆ ಹಣ ಒದಗಿಸಲಿಲ್ಲ. ಈ ಯೋಜನೆಗೆ ಇಷ್ಟು ವೆಚ್ಚವಾಗಿದೆ, ಇದನ್ನು ಮಾಡಲೇಬೇಕು, ಈ ಯೋಜನೆಯಿಂದ ಈ ರಾಜ್ಯಕ್ಕೆ ಈ ಸಮಾಜಕ್ಕೆ ಅನುಕೂಲವಾಗುತ್ತದೆ, ಏಕೆ ಮಾಡಲಿಕ್ಕಾಗುತ್ತಿಲ್ಲ ? ಈ ರೀತಿಯ ಪ್ರಶ್ನೆಗಳನ್ನು ಯಾರೂ ಕೇಳುತ್ತಿಲ್ಲ. ನನ್ನ ಸಮೇತ ಯಾರೂ ಕೂಡ ಅಂಕಿ ಅಂಶಗಳು ಅಥವಾ documents ಇಟ್ಟುಕೊಂಡು ಮಾತನಾಡುತ್ತಿಲ್ಲ. ಯಾವುದೇ ವಿಚಾರ ಬಂದಾಗ, ಯೋಜನೆಗಳ ಬಗ್ಗೆ ಚರ್ಚೆಯಾದಾಗ, 'ಆಯಿತು', 'ಹೋಯಿತು' ಎಂದು ಎಲ್ಲೋ ಜ್ಞಾನವಿಲ್ಲದ ಒಬ್ಬ ಸಾಮಾನ್ಯ ನಾಗರೀಕ ಮಾತನಾಡಿದ ರೀತಿಯಲ್ಲಿ ಮಾತನಾಡುವುದು ಸರಿಯಲ್ಲ ಎನ್ನುವುದು ನನ್ನ ಭಾವನೆ. ನಾನು ಏಕೆ ಈ ಮಾತನ್ನು ನೊಂದು ಹೇಳುತ್ತಿದ್ದೇನೆ ಎಂದರೆ, ನೈಸ್ ಬಗ್ಗೆ ಮಾತನಾಡುತ್ತಾರೆ, ಮೊನ್ನೆ ರಾಜ್ಯಪಾಲರ ಭಾಷಣದಲ್ಲಿ ಅನೇಕ ಬಡಾವಣೆಗಳನ್ನು ಮಾಡಬೇಕೆಂದು ಹೇಳಿದರೆ, ಹಿಂದೆ ಏನೋ ವ್ಯವಹಾರ ಇದೆ ಎನ್ನುತ್ತಾರೆ. ಎಲ್ಲರೂ ಒಂದಲ್ಲ ಒಂದು ಸಾರಿ ಅಧಿಕಾರಕ್ಕೆ ಬರುತ್ತೇವೆ. ಎಲ್ಲೋ ಒಂದು ಕಡೆ ಚರ್ಚೆ ಮಾಡುತ್ತೇವೆ, ವೇದಿಕೆ ಮೇಲೆ

ಮಾತನಾಡುತ್ತೇವೆ. ನಮ್ಮ ನೈತಿಕತೆಯ ಬಗ್ಗೆ ಮಾತನಾಡುವಾಗ ನಾವು ಸ್ವಚ್ಛವಾಗಿರಬೇಕು. ಆ ದಕ್ಷತೆ ನಮ್ಮಲ್ಲಿ ಇರಬೇಕು. ನಮ್ಮ commitment ಅನ್ನು ತೋರಿಸಬೇಕು. ಅದಕ್ಕಾಗಿ ಯೋಜನೆ ಯಾವ ರೀತಿಯಲ್ಲಿ ತರಬೇಕು, ನಿಮ್ಮ allocation ಯಾವ ರೀತಿ ಇರಬೇಕು ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳಬೇಕು. ನಿಮ್ಮ Finance Department ಏನು ಮಾಡುತ್ತಿದೆ, ಏಕೆ ಯೋಜನೆಗೆ ಹಣ ಒದಗಿಸಲಿಲ್ಲ ಎಂಬ ಬಗ್ಗೆ ಮಾತನಾಡಬೇಕೇ ವಿನಃ ಇದರಲ್ಲಿ ಭ್ರಷ್ಟಾಚಾರ ಇದೆ ಎಂದು ದಯವಿಟ್ಟು ಮಾತನಾಡುವುದನ್ನು ನಾವು ಬಿಡಬೇಕೆಂದು ನಾನು ಮಾನ್ಯ ಅಧ್ಯಕ್ಷರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಬಹುಶಃ ದಕ್ಷಿಣ ಭಾರತದಲ್ಲಿ ಪ್ರಥಮ ಬಾರಿಗೆ ಬಿ.ಜೆ.ಪಿ. ಸರ್ಕಾರ, ಸನ್ಮಾನ್ಯ ಯಡಿಯೂರಪ್ಪನವರ ಸರ್ಕಾರ ಬರುವುದಕ್ಕೆ ರಾಜ್ಯದ ಜನ ಆಶೀರ್ವಾದ ಮಾಡಿ ಅವಕಾಶ ಮಾಡಿಕೊಟ್ಟಿದ್ದಾರೆ. ಅನೇಕ ವರ್ಷಗಳಿಂದ ಹೋರಾಟ ಮಾಡಿದ್ದರೂ ಸಹ ನಮಗೆ ಅಧಿಕಾರ ಕೊಟ್ಟಿರಲಿಲ್ಲ. ಮಾನ್ಯ ಯಡಿಯೂರಪ್ಪನವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ಅವರು ಈ ಹಿಂದೆ Coalition Governmentನಲ್ಲಿ ಉಪ ಮುಖ್ಯಮಂತ್ರಿಗಳಾಗಿದ್ದರು. ಅನೇಕ ಯೋಜನೆಗಳನ್ನು ಮಾನ್ಯ ಕುಮಾರಸ್ವಾಮಿಯವರೇ ಮಾಡಿದ್ದು ಎಂದು ಅನೇಕ ಬಾರಿ ಕೆಲವರು ಹೇಳುತ್ತಾರೆ. ನಮ್ಮ ಬೆಂಬಲ ಇಲ್ಲದೆ, ನಮ್ಮ ಸಹಕಾರ ಇಲ್ಲದೆ, ನಮ್ಮ ಮಾರ್ಗದರ್ಶನ ಇಲ್ಲದೆ, ನೀವು ಯಾವುದೇ ಯೋಜನೆ ತರಲಿಕ್ಕೆ ಆಗಲಿಲ್ಲ. ನಿಮ್ಮ ಭಾವನೆಗಳು ಇರಬಹುದು, ಕ್ಯಾಬಿನೆಟ್‌ನಲ್ಲಿ ಅಪ್ರೂವಲ್ ಆಗಬೇಕಾದರೆ, ಈ ರಾಜ್ಯದ ಯೋಜನೆಗಳ ಬಗ್ಗೆ ಚರ್ಚೆ ಆಗಬೇಕಾದರೆ, ನಮ್ಮ ಸಹಕಾರ ಇಲ್ಲದೆ ಮುಖ್ಯಮಂತ್ರಿಯಾಗಿ ಒಂದು ನಿಮಿಷ ಇರಲಿಕ್ಕಾಗುತ್ತಿರಲಿಲ್ಲ. ಅಂದಿನ Coalition Governmentನ ಪ್ರತಿಯೊಂದು ಅಭಿವೃದ್ಧಿ ಕಾರ್ಯದ ಅನುಷ್ಠಾನದಲ್ಲಿ ಬಿ.ಜೆ.ಪಿ.ಯ ಸಹಕಾರ ಇದೆ, ಬಿ.ಜೆ.ಪಿ. ಶಾಸಕರ ಓಟು ಇದೆ. ನಮ್ಮ ಬೆಂಬಲ ಇಲ್ಲದೆ ನೀವೇನು ಮಾಡಲಿಲ್ಲ. ಅನೇಕ ಯೋಜನೆಗಳ ಬಗ್ಗೆ ಚರ್ಚೆಯಾಗಿದೆ. ಸನ್ಮಾನ್ಯ ಯಡಿಯೂರಪ್ಪನವರು ಅವರ vision ರೀತಿಯಲ್ಲಿ ಈ ರಾಜ್ಯವನ್ನು ಅಭಿವೃದ್ಧಿ ಮಾಡಬೇಕೆಂದು ಹೇಳಿದ್ದಾರೆ.

ನಾವು ಬರ ನೋಡಿದ್ದೇವೆ. ಅನೇಕ ಮುಖ್ಯಮಂತ್ರಿಗಳು ಮಳೆ ಇಲ್ಲದೆ, ನೀರು ಇಲ್ಲದೆ, ಎಲ್ಲಿಂದ ನೀರು ತಂದು ಕೊಡಬೇಕು ? ಎಷ್ಟು ಬೋರ್‌ವೆಲ್ಸ್ ಹಾಕಬೇಕು ? ಎಂಬ ಪ್ರಸಂಗ ಎದುರಿಸಿದ್ದಾರೆ. ಇಡೀ ಬೆಂಗಳೂರಿನಲ್ಲಿ ground water 1000–1200 ಅಡಿಗೆ ಹೋಗಿದೆ. 1200 ಅಡಿ ಕೊರೆದರೂ ನೀರು ಸಿಗುವುದಿಲ್ಲ. ಅಂತಹ ಬರವನ್ನು ಎದುರಿಸಿದ್ದೇವೆ. ಯಾವತ್ತೂ ನಾವು ಪ್ರವಾಹವನ್ನು ನೋಡಿರಲಿಲ್ಲ. ಈ ರಾಜ್ಯದ ಮೂರನೇ ಒಂದು ಭಾಗ ಪ್ರವಾಹಕ್ಕೆ ತುತ್ತಾಯಿತು. ಪ್ರವಾಹ ಬಂದಾಗ ರಾಜ್ಯದ ಮುಖ್ಯಮಂತ್ರಿ, ಈ ರಾಜ್ಯದ ಆಡಳಿತ ಪಕ್ಷದ ಮಂತ್ರಿಗಳು, ಶಾಸಕರು, ತಕ್ಷಣ ಏನು ಕ್ರಮ ತೆಗೆದುಕೊಳ್ಳಬೇಕೋ, ಅದನ್ನು ತೆಗೆದುಕೊಂಡೆವು.

ಶ್ರೀ ಸಿದ್ದರಾಮಯ್ಯ : ಮೈಸೂರಿನಲ್ಲಿ ಬೈಟೆಕ್‌ನಲ್ಲಿದ್ದರು.

ಶ್ರೀ ಎ. ನಾರಾಯಣಸ್ವಾಮಿ : ಸರ್, ಬೈಟೆಕ್ . ಮಾಡಲೇ ಬೇಕು, ಪ್ರತಿಯೊಬ್ಬ ವ್ಯಕ್ತಿಗೂ ಮಾರ್ಗದರ್ಶನದ ಅವಶ್ಯಕತೆ ಇದೆ. ಪ್ರತಿಯೊಬ್ಬ ವ್ಯಕ್ತಿ ವಿಚಾರಗಳನ್ನು ಕಲಿಯುತ್ತಲೆ ಇರಬೇಕು. ತನ್ನ ಅಂತಿಮ ಘಟ್ಟ ಮುಟ್ಟುವವರೆಗೆ ತನ್ನ ಸ್ನೇಹಿತ, ತನ್ನ ಗುರು, ತನ್ನ ತಂದೆ, ತನ್ನ ಅಣ್ಣ, ತನ್ನ ಸಮಾಜ, ತನ್ನ ಪರಿಸರದಿಂದ ಕಲಿಯುತ್ತಲೇ ಇರಬೇಕು, ಕಲಿಯುವುದಕ್ಕೆ ಹೋಗಿದ್ದಾರೆ. ಆದರೆ ಬೈಟೆಕ್‌ನಲ್ಲಿ ಕುಳಿತುಕೊಂಡು ತಾವು ಯಾವರೀತಿ ಜವಾಬ್ದಾರಿಗಳನ್ನು ನಿರ್ವಹಿಸಬೇಕು, ಆ ಕೆಲಸವನ್ನು ಮಾಡಿದ್ದಾರೆ. ಒಬ್ಬ ಮಹಿಳಾ ಮಂತ್ರಿ ತತ್‌ಕ್ಷಣ Helicopter ನಲ್ಲಿ ಅಲ್ಲಿಗೆ ಹೋಗಿದ್ದಾರೆ, ಎಲ್ಲಾ ಮಂತ್ರಿಗಳು ಹೋಗಲಿಲ್ಲವೆಂದಲ್ಲ, ಆ ಮಹಿಳೆ ಧೈರ್ಯ ಮಾಡಿ ಹೋಗಿದ್ದಾರೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಹೋಗಿದ್ದವರ ಕತೆ ಏನಾಯಿತು?

ಶ್ರೀ ಎ. ನಾರಾಯಣಸ್ವಾಮಿ : ನೀವು, ಯಾವುದನ್ನು ಕಲಿಯದೆ ನಾನು ಬುದ್ಧಿವಂತ, ನಾನೇ ಪ್ರಜ್ಞಾವಂತ, ನನಗೆ ಎಲ್ಲಾ ಗೊತ್ತು ಎಂದರೆ, ಒಂದೊಂದು ಪ್ರಾಣಕ್ಕೂ ಬೆಲೆ ಇದೆ, ನಾವ್ಯಾರು ಯಾರಿಗೂ ಪ್ರಾಣ ಕೊಡುವುದಕ್ಕಾಗುವುದಿಲ್ಲ. ಸಂಕಷ್ಟದಲ್ಲಿರುವ ವ್ಯಕ್ತಿಗೆ ಧೈರ್ಯವನ್ನು ತುಂಬಬೇಕು, ನೀವು ಪ್ರಾಣ ಕೊಡುವುದಕ್ಕಾಗುವುದಿಲ್ಲ, ಧೈರ್ಯ ತುಂಬಿದಾಗ

ಆತನೇ ಅದನ್ನು ಜಾರಿ ಮಾಡುತ್ತಾನೆ, ಅವನು ಎದ್ದು ಬರುತ್ತಾನೆ, ನಾವೆಲ್ಲರು ಆ ಧೈರ್ಯ ತುಂಬುವಂಥ ಕೆಲಸವನ್ನು ಮಾಡುತ್ತಿರುವುದು, ನಮ್ಮ ಆಸ್ತಿಯನ್ನು ಯಾರಿಗು ಬರೆದುಕೊಡುತ್ತಿಲ್ಲ.

ಶ್ರೀ ಹೆಚ್.ಪಿ. ಬಾಲಕೃಷ್ಣ : ಅವರು Helicopter ನಲ್ಲಿ ಹೋದ ಮೇಲೆ ನಂತರ ಮಂತ್ರಿಮಂಡಲದಲ್ಲಿ ಅವರ ಸ್ಥಿತಿ ಏನಾಯಿತು ಎಂದು ಹೇಳುತ್ತಿದ್ದೇವೆ, ನೀವು ಹೇಳುವುದರ ಬಗ್ಗೆ ನಮ್ಮದೇನು ತಕರಾರು ಇಲ್ಲ ಸ್ವಾಮಿ, ನಾವು ಒಪ್ಪಿಕೊಂಡಿದ್ದೇವೆ.

ಶ್ರೀ ಎನ್.ಎಲ್ ನರೇಂದ್ರ ಬಾಬು : ಅವರ ರಕ್ಷಣೆಗೆ ಯಾರು ಬರಲಿಲ್ಲ.

ಶ್ರೀ ಎ. ನಾರಾಯಣಸ್ವಾಮಿ : ಸಮಾಜದ ಸುಧಾರಣೆ, ಪರಿವರ್ತನೆ, ಸಮಾಜಕ್ಕೆ ಧೈರ್ಯ ಕೊಡುವುದು ಮಂತ್ರಿ ಪದವಿಯಿಂದಲ್ಲ, ಆ ವ್ಯಕ್ತಿ ತನ್ನ ಜವಾಬ್ದಾರಿಯನ್ನು ಯಾವ ರೀತಿ ನಿರ್ವಹಿಸಿದ್ದಾನೆ ಎಂಬುದನ್ನು ಯೋಚನೆ ಮಾಡಬೇಕೆ ವಿನ: ಹೇಳದೆ ಹೋದರೆ ಅವಶ್ಯಕತೆ ಇಲ್ಲ. ಬಹುಶ: ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಬಹಳಷ್ಟು ಸಹಕಾರವನ್ನು ನೀಡಿದೆ. ಈ ರಾಜ್ಯದ ಪ್ರವಾಹಕ್ಕೆ ಅವಶ್ಯವಿದ್ದ ಹಣವನ್ನು ಕೇಳಿದಾಗ ಈ ರಾಜ್ಯಕ್ಕೆ ಭೇಟಿ ನೀಡಿ ಸುಮಾರು 1,878 ಕೋಟಿ ರೂಪಾಯಿಗಳನ್ನು ಈ ರಾಜ್ಯಕ್ಕೆ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ, ಕೇಂದ್ರ ಸರ್ಕಾರಕ್ಕೆ ನಾವು ಅಭಿನಂದನೆಗಳನ್ನು ಸಲ್ಲಿಸಬೇಕು. ಅದರ ಜೊತೆಗೆ, ಪ್ರವಾಹಕ್ಕೆ ಸರಿಯಾಗಿ ಕೆಲಸ ಮಾಡಲಿಲ್ಲ, ಆಶ್ರಯ ನೀಡಲಿಲ್ಲ, ರಸ್ತೆಯಾಗಲಿಲ್ಲ, ಚರಂಡಿಯಾಗಲಿಲ್ಲ, ನೀರು ಕೊಡಲಿಲ್ಲವೆಂದು ಚರ್ಚೆಯಾಗಿದೆ. ಮತ್ತೊಂದು ಈ ರಾಜ್ಯದ ಮುಖ್ಯಮಂತ್ರಿಯಾಗಿ ಜನರ ಸಹಕಾರವನ್ನು ಕೋರಿದಾಗ, ಈ ರಾಜ್ಯ ಸಂಕಷ್ಟದಲ್ಲಿದೆ, ಯಾರು ಈ ಸಮಾಜದಲ್ಲಿ ಜವಾಬ್ದಾರಿಯನ್ನು ಹೊತ್ತುಕೊಳ್ಳುತ್ತೀರಾ, ಸಹಕಾರ ಕೊಡಬೇಕೆಂದು ಹೋದಾಗ ಅನೇಕ ಮಹನೀಯರು ಕೊಡುಗೆಯನ್ನು ಹಣದ ಮುಖಾಂತರ, ಧಾನ್ಯದ ಮುಖಾಂತರ ಸಹಾಯ ಮಾಡಿದರು. ಇವತ್ತಿನವರೆಗೆ ಈ ಸದನದಲ್ಲಿ ಯಾರ್ಯಾರು ಆ ಉತ್ತರ ಕನ್ನಡದ ಪ್ರವಾಹದಲ್ಲಿ ಸಂಕಷ್ಟಕ್ಕೆ ಸಿಕ್ಕಿದವರ ನೆರವಿಗೆ

ಬಂದ ಆ ಸಂಘಸಂಸ್ಥೆಗಳ ಬಗ್ಗೆ ಚರ್ಚೆಯಾಗಲಿಲ್ಲ, ಅವರಿಗೆ ಅಭಿನಂದನೆಗಳನ್ನು ಹೇಳಿಲ್ಲ, ಅವರು ಎಷ್ಟು ಕೊಟ್ಟರು, ಏನು ಮಾಡಿದರು, ಎಲ್ಲಿಗೆ ಬಂದರು, ಯಾರನ್ನು ಭೇಟಿ ಮಾಡಿದರು, ಇದ್ಯಾವುದನ್ನು ಚರ್ಚೆ ಮಾಡಲಿಲ್ಲವೆಂದು ನನಗನಿಸುತ್ತದೆ. ಚರ್ಚೆ ಮಾಡಿ ನಾವು ಅಭಿನಂದನೆಗಳನ್ನು ಸಲ್ಲಿಸಿದ್ದರೆ ಖಂಡಿತ ಇನ್ನಷ್ಟು ಸಮಾಜ ಸುಧಾರಕರು, ಧಾನಿಗಳು ನಮ್ಮ ಜೊತೆ ಕೈಜೋಡಿಸುತ್ತಿದ್ದರೆಂದು ನನಗನಿಸುತ್ತದೆ. ಇವತ್ತು ನಮ್ಮ ರಾಜ್ಯದವರಿರಬಹುದು, ವಿದೇಶದಲ್ಲಿರುವ ಜನರಿರಬಹುದು, ಸಂಸ್ಥೆಗಳ ಬಹಳಷ್ಟು ಜನರು ಮುಂದೆ ಬಂದು ನಮಗೆ ಸಹಾಯವನ್ನು ಮಾಡಿದ್ದಾರೆ. Infosys ರವರು, Wipro ರವರು, Biocon ರವರು, Jindal ರವರು, ಕಲ್ಯಾಣಿ ರವರು, Rajeev Chandrashekhar Foundation ವತಿಯಿಂದ, Larsen and Tubro ರವರು, ರೇಣುಕ ಶುಗರ್ಸ್, ಸೇವಾ ಭಾರತಿ, ಆದಿಚುಂಚನಗಿರಿ ಮಠ, ಪೇಜಾವರ ಮಠ, ರಾಮಚಂದ್ರ ಮಠ, ಶ್ರೀ ಕ್ಷೇತ್ರದ ಧರ್ಮಸ್ಥಳ, Metro Corp. ರವರು, ರಾಮಕೃಷ್ಣ ಆಶ್ರಮ, ಮಾತಾ ಅಮೃತಾನಂದಮಯಿ ಟ್ರಸ್ಟ್ ಇವರು ಮೊನ್ನೆ ಮುಖ್ಯಮಂತ್ರಿಗಳಿಗೆ ನೂರು ಮನೆಗಳ ಬೀಗದ ಕೈಗಳನ್ನು handover ಮಾಡಿದರು, ಟ್ರೇಡ್ ಅಂಡ್ ಆರ್.ಎನ್.ಶೆಟ್ಟಿ ಸಮೂಹಗಳು, ಮೈಸೂರಿನ ಸಿಟಿಜನ್ ಫೋರಂ, Cisco, ಟಿ.ವಿ 9, ಪ್ರತಿನಿತ್ಯ ಟಿವಿ9ನಲ್ಲಿ ಆ ಮಾಧ್ಯಮದವರು ಯಾವ ರೀತಿ ಅಲ್ಲಿರತಕ್ಕಂಥ ಜನತೆಗೆ ಸಹಕಾರವನ್ನು ನೀಡುತ್ತಿದ್ದರು, ಆಶ್ರಯವನ್ನು ನೀಡುತ್ತಿದ್ದರು, ಅನ್ನ ನೀಡುತ್ತಿದ್ದರು, ನೇರವಾಗಿ ಜನರೊಡನೆ ಸಂಪರ್ಕವನ್ನು ಮಾಧ್ಯಮದ ಮೂಲಕ ಇಟ್ಟುಕೊಂಡು ಅವರು ಸಹಕಾರವನ್ನು ನೀಡಿದ್ದಾರೆ. ಜಿ.ಎಂ ಅಂಡ್ ಸಮೂಹ, ಬಳ್ಳಾರಿಯ ಗಣಿ ಸಂಸ್ಥೆಗಳು, ಈ ದೇಶದಲ್ಲಿ ಸರ್ಕಾರವನ್ನು ಉಪಯೋಗಿಸಿಕೊಂಡರೊ, ವಿದೇಶ ಸಂಪತ್ತನ್ನು ಯಾವರೀತಿ ಸಂಪಾದನೆ ಮಾಡಿದರೋ ಗೊತ್ತಿಲ್ಲ, ಗಣಿ ಬಗ್ಗೆ ಚರ್ಚೆಯಾಗುತ್ತದೆ. ಅಧಿಕಾರಿಗಳು, ರಾಜಕಾರಣಿಗಳು ಯಾರ್ಯಾರು ಎಷ್ಟೆಷ್ಟು ಕೋಟಿ ಹಣವನ್ನು ಮಾಡಿದ್ದಾರೆಂಬುದರ ಬಗ್ಗೆ ಸಿಬಿಐ ತನಿಖೆಯಾಗಬೇಕು, ಒಂದು ಸಾರಿಯಾದರೆ ಯಾರದನ್ನು ಮಾಡುವ ಅವಶ್ಯಕತೆ ಇಲ್ಲ. ಒಂದು ಸಾರಿ

ಸಿಬಿಐ ತನಿಖೆಯಾಗಿ ಯಾರ್ಯಾರು ಎಷ್ಟೆಷ್ಟು ಹಣ, ಆಸ್ತಿ ಲೂಟಿ ಮಾಡಿದ್ದಾರೆಂಬ ಅಂಕಿಅಂಶ ಈ ಸಮಾಜಕ್ಕೆ, ಸರ್ಕಾರಕ್ಕೆ ಸರಿಯಾಗಿ ಒದಗಿ ಬಂದರೆ ಈ ಸಂಪತ್ತನ್ನು ಯಾವರೀತಿ ಲೂಟಿ ಮಾಡಿದ್ದಾರೆ, ಭ್ರಷ್ಟಾಚಾರ ಮಾಡಿದ್ದಾರೆಂಬುದು ಅರ್ಥವಾಗುತ್ತದೆ. ಗಣಿಸಂಸ್ಥೆಗಳು ಲಕ್ಷಾಂತರ ಮನೆಗಳನ್ನು ಕಟ್ಟಿಕೊಟ್ಟಿದ್ದರೆ, ಹಣ ಮಾಡಿದವರೆಲ್ಲಾ ಧನಸಹಾಯ ಮಾಡಲಿಲ್ಲ, ಹಣ ಮಾಡಿದವರೆಲ್ಲಾ ಸಹಾಯಹಸ್ತವನ್ನು ನೀಡಲಿಲ್ಲ..

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ರಾಜುಗೌಡರು ಮಾತನಾಡುವಾಗ 35 ಸಾವಿರ ಮನೆಗಳಲ್ಲಿ ಈಗ ಹದಿಮೂರುವರೆ ಸಾವಿರ ಮನೆಗಳನ್ನು ಕಟ್ಟುತ್ತಿದ್ದಾರೆಂದು ಹೇಳಿದರು, ನೀವು ಲಕ್ಷಾಂತರ ಮನೆಗಳನ್ನು ಕಟ್ಟುತ್ತಿದ್ದಾರೆನ್ನುತ್ತೀರಿ..

(ಗೊಂದಲ)

ಶ್ರೀ ಎ. ನಾರಾಯಣಸ್ವಾಮಿ : ಒಂದು ತಿಂಗಳ ಹಿಂದೆ ಮತ್ತೆ 50,000 ಮನೆಗಳನ್ನು ಪ್ರಾರಂಭ ಮಾಡಿದ್ದಾರೆ..

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ನೀವು ಏನು ಹೇಳಿದಿರೆಂದು ಕಡತ ತೆಗೆದು ನೋಡಿ.

ಶ್ರೀ ಎ. ನಾರಾಯಣಸ್ವಾಮಿ : ಖಂಡಿತಾ ಪ್ರಾರಂಭ ಮಾಡಿದ್ದಾರೆ, ಲಕ್ಷಕ್ಕೂ ಮೇಲ್ಪಟ್ಟು ಮನೆಗಳನ್ನು ಕಟ್ಟಿಕೊಡುತ್ತಾರೆಂಬ ಭರವಸೆ ಅವರ ಮೇಲೆ ನನಗಿದೆ..

(ಗೊಂದಲ)

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಅರಣ್ಯ ಲೂಟಿ ಮಾಡಿ ಮನೆ ಕಟ್ಟಿಸಿಕೊಡುವುದು ದೊಡ್ಡ ಕೆಲಸವಲ್ಲ.

ಶ್ರೀ ಎ. ನಾರಾಯಣಸ್ವಾಮಿ : ಯಾರ್ಯಾರು ಲೂಟಿ ಮಾಡಿದರೆಂದು ಪಟ್ಟಿ ಮಾಡೋಣ, ಆ ಬಗ್ಗೆ ಇನ್ನೊಂದು ದಿವಸ ಚರ್ಚೆಯಾಗಲಿ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಈ ರೀತಿ ಲೂಟಿ ಮಾಡಿ ಮನೆಕಟ್ಟಿಸಿದ್ದಾರೆಂದು ಹೊಗಳಿದರೆ ಇಲ್ಲಿ ಕುಳಿತು ಕೇಳುವುದಕ್ಕೆ ನಮಗೆ ನಾಚಿಕೆಯಾಗುತ್ತದೆ, ದಯವಿಟ್ಟು ಸ್ವಲ್ಪ ವಿಚಾರ ಮಾಡಿ,

ಶ್ರೀ ಎ. ನಾರಾಯಣಸ್ವಾಮಿ : ಲೂಟಿ ಯಾರ್ಯಾರು ಮಾಡಿದರೆಂಬುದರ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಟ್ಟಾಗ ಲೂಟಿಯ ಬಗ್ಗೆ ಚರ್ಚೆ ಮಾಡೋಣ.

ಛೇರ್ಮನ್ : ಡಾಕ್ಟರೆ, ಬೇರೆಯದರ ಬಗ್ಗೆ ಚರ್ಚೆ ಮಾಡುವುದು ಬೇಡ ತಾವು ಕುಳಿತುಕೊಳ್ಳಿ, ಈಗ ಅವರು ಮಾತನಾಡಲು ಅವಕಾಶ ಕೊಡಲಾಗಿದೆ, ಈ ವಿಷಯವನ್ನು ಮಾತನಾಡಲು ಅವಕಾಶ ಕೊಟ್ಟಾಗ ಮಾತನಾಡಿ ನೀವು...

(ಗೊಂದಲ)

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : I am on point of order.

(ಗೊಂದಲ)

ಶ್ರೀ ಎ. ನಾರಾಯಣಸ್ವಾಮಿ : ಈ ರಾಜ್ಯದ ಮಾಜಿ ಮುಖ್ಯಮಂತ್ರಿಗಳು ಯಾರಿದ್ದರು, ಅವರ ಆರ್ಥಿಕ ಪರಿಸ್ಥಿತಿಯನ್ನು ಆಮೇಲೆ ಚರ್ಚೆ ಮಾಡೋಣ, ಯಾರ್ಯಾರು ಈ ಅಧಿಕಾರದ ಚುಕ್ಕಾಣಿಯನ್ನು ಹಿಡಿದಿದ್ದರು, ಯಾರದಿತ್ತು ಎಂಬುದೆಲ್ಲಾ ಚರ್ಚೆಯಾಗಲಿ..

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: I am on a point of order.

ಛೇರ್ಮನ್ : ಇಲ್ಲಿ ವಿಷಯಕ್ಕೆ ಸಂಬಂಧಿಸಿದಂತೆ ಏನಾದರೂ ಕೇಳುವುದಕ್ಕಿದ್ದರೆ ಅಲ್ಲಿ ಕೇಳೋಣ, ಈಗ point of order ಇಲ್ಲ ಕುಳಿತುಕೊಳ್ಳಿ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: Now I am on a point of order, you have to allow me. ಈಗ ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆಂದರೆ, ಒಂದು ವೇಳೆ ಗಣಿ ಮಾಲೀಕರು ದುಡ್ಡು ಮಾಡದೆ

ಹೋಗಿದ್ದರೆ, ಇಲ್ಲಿ ಸಹಾಯ ಮಾಡುವುದಕ್ಕಾಗುತ್ತಿರಲಿಲ್ಲ, ಪಾಪ, ನಮ್ಮ ಜನರು ಸತ್ತೇ ಹೋಗುತ್ತಿದ್ದರೆನ್ನುವ ರೀತಿಯಲ್ಲಿ ಮಾತನಾಡುತ್ತಿದ್ದಾರೆ, ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ, is it not the responsibility of the House not to allow such things? ಗಣಿ ಮಾಲೀಕರು ಹಣ ಮಾಡದೆ ಹೋಗಿದ್ದರೆ ಇಲ್ಲಿ ಮನೆ ಕಟ್ಟಿಸುವುದಕ್ಕಾಗುತ್ತಿರಲಿಲ್ಲ ಎಂದು ಹೇಳುವುದು, anybody speaking like this, it is a shame on this House.

(ಗೊಂದಲ)

ಶ್ರೀ ಎ.ನಾರಾಯಣಸ್ವಾಮಿ : ನಾನು ಆ ಪದವನ್ನು ಹೇಳಲಿಲ್ಲ, ಅವರು ಸದನವನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ .

(ಗೊಂದಲ)

ಛೇರ್ಮನ್ : ತಾವು ದಯವಿಟ್ಟು ಕುಳಿತುಕೊಳ್ಳಿ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ನನ್ನ point of order ಮೇಲೆ ನೀವು ರೂಲಿಂಗ್ ಕೊಡಿ,

ಛೇರ್ಮನ್ : ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಚರ್ಚೆ ಮಾಡೋಣ, ಇಲ್ಲಿ ಅವರು ಹೇಳಿರುವುದನ್ನು ತಪ್ಪಾಗಿ ಅರ್ಥ ಮಾಡಿಕೊಳ್ಳಬೇಡಿ, ಅವರು ಯಾರು ಇದಕ್ಕೆ ಸಹಕಾರ ಕೊಡುತ್ತಿದ್ದಾರೆಂದು ಹೇಳುತ್ತಿದ್ದಾರೆ..

(ಗೊಂದಲ)

ಡಾ: ಶರಣಪ್ರಕಾಶ್ ಆರ್. ಪಾಟೀಲ್ : ಗಣಿ ಮಾಲೀಕರು ಯಾವರೀತಿ ಲೂಟಿ ಮಾಡುತ್ತಿದ್ದಾರೆಂದು ಇಲ್ಲಿ ಚರ್ಚೆ ಬೇಕಾಗಿಲ್ಲ, ಇಡೀ ರಾಜ್ಯದ ಜನತೆಗೆ ಗೊತ್ತಿದೆ, ಅರಣ್ಯ ಲೂಟಿ ಮಾಡುತ್ತಿದ್ದಾರೆ, Bellary is under the grip of certain Ministers ಎಂದು, ಇಲ್ಲಿ ಚರ್ಚೆಯ ಅವಶ್ಯಕತೆ ಇಲ್ಲ. ಯಾವ ರೀತಿ ಲೂಟಿ ಆಗುತ್ತಿದೆ ಎಂದು ಜನರಿಗೆ ಗೊತ್ತಿದೆ. ಇದು ಈ ಸದನಕ್ಕೆ ಅನುಮಾನ. It is insult to the house.

ಛೇರ್ಮನ್ : ಅದರ ಬಗ್ಗೆ ಪ್ರತ್ಯೇಕವಾಗಿ ಚರ್ಚೆ ಮಾಡೋಣ. ನಾರಾಯಣಸ್ವಾಮಿಯವರೇ ಮುಂದುವರೆಸಿ.

ಶ್ರೀ ಎ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೆ, ಸಹಾಯ ಹಸ್ತ ನೀಡಿದವರು ಬಹಳ ಜನ ಇದ್ದಾರೆ. ದಾಲ್ಮಿಯಾ ಸಿಮೆಂಟ್ಸ್‌ನವರು, ಭರೂಕ ಪವರ್ ಕಾರ್ಪೋರೇಷನ್‌ನವರು, Home foundation, ಹಟ್ಟಿ ಗೋಲ್ಡ್ ಮೈನ್ಸ್, ಚಂದ್ರಶೇಖರ ಸ್ವಾಮೀಜಿಯವರು, ಕಮ್ಮವಾರಿ ಸಂಘ, JSW Steel ಇತ್ಯಾದಿ ಸಂಸ್ಥೆಗಳು ಪುನರ್ವಸತಿ ಕಾರ್ಯಕ್ರಮದಲ್ಲಿ ಸಹಕಾರ ನೀಡಿವೆ. ಅನೇಕ ಶಾಸಕರೂ ಸಹ ತಮ್ಮ ತಮ್ಮ ಕ್ಷೇತ್ರದಲ್ಲಿ ಬರತಕ್ಕಂತಹ ಕೈಗಾರಿಕೋದ್ಯಮಗಳನ್ನು ಸಂಸ್ಥೆಗಳನ್ನು ಭೇಟಿ ಮಾಡಿ, ಆ ಭಾಗದಲ್ಲಿ ಸಂಕಷ್ಟಕ್ಕೊಳಗಾದಂತಹ ಜನರಿಗೆ ಸಹಕಾರವನ್ನು ಮಾಡಿದ್ದಾರೆ. ರಾಜ್ಯಪಾಲರ ವಂದನಾ ನಿರ್ಣಯದ ಈ ಸಮಯದಲ್ಲಿ ಯಾರ್ಯಾರು ಆ ಭಾಗದಲ್ಲಿ ಪ್ರವಾಹ ಪೀಡಿತರಾದ ವ್ಯಕ್ತಿಗಳಿಗೆ ಸಹಾಯ ಮಾಡಿದ್ದಾರೆ, ಅವರಿಗೆಲ್ಲಾ ಈ ಸದನದ ಮುಖಾಂತರ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆ ಸಮಯದಲ್ಲಿ ಪ್ರತಿ ಕುಟುಂಬಕ್ಕೆ 20 ಕೆ.ಜಿ. ಅಕ್ಕಿ, 10 ಕೆ.ಜಿ. ಗೋಧಿ, ಐದು ಕೆ.ಜಿ. ಸಕ್ಕರೆ, ತೊಗರಿ ಬೇಳೆ, ಅವರಿಗೆ ಅವಶ್ಯಕತೆ ಇರುವ ದಿನನಿತ್ಯದ ಬಳಕೆ ವಸ್ತುಗಳನ್ನು ನೀಡಿ, ಸುಮಾರು 1715 ಗಂಜಿ ಕೇಂದ್ರಗಳನ್ನು ತೆಗೆದಿದ್ದಾರೆ. ಶೆಡ್‌ಗಳನ್ನು ಕಟ್ಟಿದ್ದಾರೆ, ನೆರೆ ಹಾವಳಿಯಿಂದ ಆದ ನಷ್ಟವನ್ನು 18,568 ಕೋಟಿ ಎಂದು ರಾಜ್ಯ ಸರ್ಕಾರದ ವತಿಯಿಂದ ಅಂದಾಜು ಮಾಡಲಾಗಿದೆ. ಕೇಂದ್ರ ಸರ್ಕಾರಕ್ಕೆ 7,047 ಕೋಟಿ ರೂ.ಗಳ ಅಂದಾಜು ಪಟ್ಟಿ ನೀಡಿ ಮನವಿ ಮಾಡಿದಾಗ 1698 ಕೋಟಿ ರೂ. ಬಿಡುಗಡೆ ಮಾಡಿತ್ತು. ರಾಜ್ಯ ಸರ್ಕಾರ 1712 ಕೋಟಿ ವೆಚ್ಚ ಮಾಡಿ ಏನೂ ಕೆಲಸ ಮಾಡಿಲ್ಲವೆಂದು ಅನೇಕರು ಹೇಳುತ್ತಿದ್ದಾರೆ. ಒಟ್ಟಾರೆ ಈವರೆಗೆ 1626 ಕೋಟಿ ಧನ ಸಹಾಯ ಸಂಗ್ರಹವಾಗಿದೆ. ಈ ನಿಟ್ಟಿನಲ್ಲಿ KMF ನವರು ಸಹ 5 ಕೋಟಿ ರೂ.ಗಳನ್ನು ಪರಿಹಾರ ನಿಧಿಗೆ ನೀಡಿದ್ದಾರೆ. ಈಗಾಗಲೇ 272 ಗ್ರಾಮಗಳಲ್ಲಿ ಭೂಮಿಯನ್ನು ಗುರುತಿಸಿದ್ದಾರೆ. 220 ಗ್ರಾಮಗಳಲ್ಲಿ ಆಶ್ರಯ ಯೋಜನೆಗೆ ಭೂಮಿಯನ್ನು ವರ್ಗಾವಣೆ ಮಾಡಿದ್ದಾರೆ. ಆದರೂ ಸಹ ನಮ್ಮ ಸರ್ಕಾರ ಆ ಸಂಕಷ್ಟದ ಜನರಿಗೆ ಇಷ್ಟು

ಕೆಲಸ ಮಾಡಿದರೂ ಸಹ ನಮಗ್ಯಾರಿಗೂ ತೃಪ್ತಿ ಇಲ್ಲ. ಸಂಕಷ್ಟಕ್ಕೊಳಗಾಗಿರುವ ಗ್ರಾಮಗಳಿಗೆ ರಸ್ತೆ, ಚರಂಡಿ ಹಾಗೂ ಕುಡಿಯುವ ನೀರು ಕೊಡುವುದರಲ್ಲಿ ಇಷ್ಟು ವರ್ಷಗಳಿಂದ ಯಾವುದೇ ಸರ್ಕಾರ ಸಹಕಾರ ನೀಡುವುದಕ್ಕೆ ಆಗಲಿಲ್ಲ. ಇವತ್ತು ಈ ಸಂಕಷ್ಟಕ್ಕೆ ಸಿಕ್ಕಿರುವುದರಿಂದ ರಾಜ್ಯ ಸರ್ಕಾರ ಜವಾಬ್ದಾರಿ ವಹಿಸಿಕೊಂಡು ಆ ಭಾಗದ ಎಲ್ಲಾ ಜಿಲ್ಲೆಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಅವಕಾಶ ಸಿಕ್ಕಿದೆ. ಈ ಅವಕಾಶವನ್ನು ಉಪಯೋಗಿಸಿಕೊಂಡು ನಮ್ಮ ಮುಖ್ಯ ಮಂತ್ರಿಗಳಾದ ಶ್ರೀಮಾನ್ ಯಡಿಯೂರಪ್ಪರವರು 15 ಜಿಲ್ಲೆಗಳನ್ನು ಅಭಿವೃದ್ಧಿಪಡಿಸುವುದರಲ್ಲಿ ತಮ್ಮ ಶಕ್ತಿ ಮೀರಿ ಕೆಲಸ ಮಾಡುತ್ತಾರೆ. ಎಲ್ಲಾ ಶಾಸಕರು ಸಹಕಾರ ನೀಡುವಂತೆ ಮನವಿ ಮಾಡುತ್ತಾರೆ. ಬೆಂಗಳೂರಿನ ಬಗ್ಗೆ ಹಿಂದಿನ ಮುಖ್ಯಮಂತ್ರಿಗಳು ಹೇಳುತ್ತಿದ್ದರು, ನಾನು ಹೆಸರು ಹೇಳುವುದಿಲ್ಲ. ಬೆಂಗಳೂರನ್ನು ಹೈಟೆಕ್ ಸಿಟಿ ಮಾಡುತ್ತೇನೆಂದು ಹೇಳುತ್ತಿದ್ದರು. ನನಗೆ ಹೈಟೆಕ್ ಸಿಟಿ ಎಂದರೆ ಅರ್ಥವಾಗಲಿಲ್ಲ. ವಿಶ್ವದಲ್ಲಿ IT ವ್ಯಾಲ್ಯೂ ಎಂದರೆ ನನ್ನ ಕ್ಷೇತ್ರ ಆನೇಕಲ್ ತಾಲ್ಲೂಕಿನ ಎಲ್‌ಕ್ಟ್ರಾನಿಕ್ ಸಿಟಿ. ಬೆಂಗಳೂರನ್ನು ಹೈಟೆಕ್ ಸಿಟಿ ಮಾಡುತ್ತೇನೆ ಎಂದು ಹೇಳುತ್ತಾರೆ, ಮಳೆ ಬಂದರೆ ಮಳೆಯಿಂದ ಕಾಲುವೆಗಳಲ್ಲಿ ಮಕ್ಕಳೆಲ್ಲಾ ಹರಿದುಕೊಂಡು ಹೋಗುತ್ತಾರೆ. ಅಂದಿನ ಹೈಟೆಕ್ ಸಿಟಿಯ ಕಲ್ಪನೆ. 800 ಕೋಟಿ ರೂ. ಬೆಂಗಳೂರಿಗೆ ಖರ್ಚು ಮಾಡಿದ್ದಾರೆ. ನಾವು ಇವತ್ತು ಬೆಂಗಳೂರಿನಲ್ಲಿ ಓಡಾಡಬೇಕಾಗಿದೆ. ಅನೇಕ ಶಾಸಕರು ಬೆಂಗಳೂರಿಗೆ ಬಂದಾಗ ನೀವು ಯಾವುದೇ ರಸ್ತೆಗೆ ಅಥವಾ ಬಡಾವಣೆಗೆ ಹೋಗಿ, 2006–07ರಲ್ಲಿ ನಗರಾಭಿವೃದ್ಧಿಗಾಗಿ ನಿಗದಿಪಡಿಸಿದ ಮೊತ್ತ 75,000. ನಾವು ಅನೇಕ ಮುನಿಸಿಪಾಲಿಟಿಗಳ ಅಭಿವೃದ್ಧಿಗೆ ಹಣ ಕೊಡುತ್ತೇವೆ, ಗ್ರಾಮ ಪಂಚಾಯಿತಿಗಳಿಗೆ 5,000 ರೂ. ಕೊಡುತ್ತೇವೆ.. ಹತ್ತು ಸಾವಿರ ಕೊಡುತ್ತೇವೆ, ಸ್ಥಳೀಯ ಸಂಸ್ಥೆಗಳು ಅಭಿವೃದ್ಧಿ ಆಗಬೇಕೆಂದು ನಾವು ಮಾತನಾಡುತ್ತೇವೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಪ್ರತಿ ಸ್ಥಳೀಯ ಸಂಸ್ಥೆಗಳು ಹಾಗೂ ಜಿಲ್ಲಾ ಕೇಂದ್ರಗಳಿಗೆ 100 ಕೋಟಿ ರೂ. ತಾಲ್ಲೂಕು ಕೇಂದ್ರಗಳಿಗೆ 15 ಕೋಟಿ ರೂ., ಪಟ್ಟಣ ಪಂಚಾಯಿತಿಗಳಿಗೆ 5 ಕೋಟಿ ರೂ., ಕೆಲವು ದೊಡ್ಡ ಗ್ರಾಮಗಳಿಗೆ ಎರಡು ಕೋಟಿ ರೂ.ಗಳಂತೆ 340 ಕೋಟಿ

ರೂ.ಗಳನ್ನು ಬಿಡುಗಡೆ ಮಾಡಿದ್ದಾರೆ, 60–62 ವರ್ಷಗಳಿಂದ ಬೆಂಗಳೂರಿನಲ್ಲಿರುವ ಕಂಟ್ರ್ಯಾಕ್ಟರ್ ಲಾಬಿ ಅರ್ಥವಾಗುವುದಿಲ್ಲ. ಒಬ್ಬ ಕಂಟ್ರ್ಯಾಕ್ಟರ್ ಕೆಲಸ ಮಾಡಬೇಕಾದರೆ ಅವನು ಫಾರಂ ತೆಗೆದುಕೊಳ್ಳ ಬೇಕಾದರೆ ಹಣ ಕೊಟ್ಟು ತೆಗೆದುಕೊಂಡು ಬರಬೇಕು. ಇಂತಹ ಕಂಟ್ರ್ಯಾಕ್ಟರ್‌ಗೆ ಟೆಂಡರ್‌ಗೆ ಅರ್ಜಿ ಹಾಕುವುದಕ್ಕೆ ಇಂಥ ಕಂಟ್ರ್ಯಾಕ್ಟರ್‌ಗೆ ಕೊಡಬೇಕೆಂದು ಇಡೀ ರಾಜ್ಯದಲ್ಲಿ ಲಾಬಿ ಇದೆ. ಸನ್ಮಾನ್ಯ ಯಡಿಯೂರಪ್ಪನವರ ಸರ್ಕಾರ ಆನ್ ಲೈನ್ ಮುಖಾಂತರ ಟೆಂಡರ್ ಮಾಡುವ ಹಾಗೆ ಮಾಡಿದೆ. ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ವಿದೇಶಗಳಿಂದ ಟೆಂಡರ್ ಹಾಕಿಕೊಳ್ಳಬಹುದು. ಅವನು ಎಲ್ಲಿಯೋ ಹೋಗಿ ಅರ್ಜಿ ಕೇಳುವ ಹಾಗೆ ಇಲ್ಲ. ಹಣ ಕೊಡುವ ಹಾಗೆ ಇಲ್ಲ. ರಾಜ್ಯದಲ್ಲಿ ಯಾವುದೇ ಮುನಿಸಿಪಾಲಿಟಿ, ಸಿಎಮ್.ಸಿ., BBMP ಎಲ್ಲಿಯೇ ಆಗಲಿ, ಈ–ಟೆಂಡರಿಂಗ್ ಮುಖಾಂತರ ಟೆಂಡರ್ ಸಲ್ಲಿಸುವ ಹಾಗೆ ಮಾಡಿ ಭ್ರಷ್ಟಾಚಾರದಿಂದ ವಿಮುಕ್ತಿ ಮಾಡಿದ್ದೇವೆ. ಅದು ಈ ಕರ್ನಾಟಕ ರಾಜ್ಯದ ಮಾನ್ಯ ಯಡಿಯೂರಪ್ಪನವರ ಒಂದು ಕಲ್ಪನೆ. 800 ಕೋಟಿ ರೂ.ಗಳಲ್ಲಿ ಇಡೀ ಬೆಂಗಳೂರು ಜಿಲ್ಲೆಯನ್ನು ಅಭಿವೃದ್ಧಿ ಮಾಡಿದ್ದೇವೆ. 3,383 ಕೋಟಿ ರೂ.ಗಳಲ್ಲಿ ಕಾವೇರಿ 4ನೇ ಹಂತಕ್ಕೆ ಹಣ ನಿಗದಿ ಮಾಡುತ್ತಾ, 500 ದಶಲಕ್ಷ ಟಿ.ಎಮ್.ಸಿ. ನೀರನ್ನು ಬೆಂಗಳೂರಿಗೆ ಸರಬರಾಜು ಮಾಡುವುದಕ್ಕೆ ನಮ್ಮ ಸರ್ಕಾರ ಮುಂದಾಗಿದೆ. 300 ಕೋಟಿ ರೂ.ಗಳಲ್ಲಿ 29 ಕೆರೆಗಳ ಅಭಿವೃದ್ಧಿ ಮಾಡಿದೆ. ಪಾರ್ಕುಗಳ ಬಗ್ಗೆ ಹೇಳಬೇಕೆಂದರೆ, ಬೆಂಗಳೂರು ಎಂದರೆ ಹೆಸರಿಗೆ ಗ್ರೀನ್ ಸಿಟಿ ಎಂದು. ಪಾರ್ಕುಗಳ ಬಗ್ಗೆ ಹೆಚ್ಚಿನ ಗಮನ ಕೊಟ್ಟಿರಲಿಲ್ಲ. 625 ಪಾರ್ಕುಗಳಲ್ಲಿ 280 ಪಾರ್ಕುಗಳಿಗೆ ಹಣ ಬಿಡುಗಡೆ ಮಾಡಿ ಅಭಿವೃದ್ಧಿ ಹೊಂದಿವೆ. ನನ್ನ ಕ್ಷೇತ್ರಕ್ಕೆ ಬಹಳ ಹತ್ತಿರದಲ್ಲಿ ಬೊಮ್ಮನ ಹಳ್ಳಿ ಕ್ಷೇತ್ರದಲ್ಲಿ ಕೇಂದ್ರ ರೇಷ್ಮೆ ಮಂಡಳಿಯಿಂದ ಹೆಬ್ಬಾಳದವರೆಗೆ ಸಿಗ್ನಲ್ ಮುಕ್ತ ಕಾರಿಡಾರನ್ನು 8 ಜಂಕ್ಷನ್‌ಗಳಲ್ಲಿ 380 ಕೋಟಿ ರೂ.ಗಳಲ್ಲಿ ಅಭಿವೃದ್ಧಿ ಕಾಮಗಾರಿ ಚಾಲನೆಯಾಗಿದೆ. 60 ಪರ್ಸೆಂಟ್ ಕಾಮಗಾರಿ ಮುಗಿದಿದೆ. ಕೆಲವು ಯೋಜನೆಗಳನ್ನು ಅವತ್ತು ಹಿಂದಿನ ಸರ್ಕಾರ ಬೆಂಗಳೂರಿಗೆ IRR Road ಅನ್ನು, Outer Ring Road ಅನ್ನು ಕೊಡಬೇಕೆಂದು BMRDA

5.50 ಪಿ.ಎಂ.

ನಿಂದ ಒಂದು ಯೋಜನೆಯನ್ನು ತಯಾರು ಮಾಡಿತು. ಅಂದರೆ Just Blue Print ಮಾಡಿತು. ಅದಕ್ಕೊಂದು Paper Advertisement. Outer Ring Road ಅನ್ನು ಮಾಡಿದ್ದೇವೆ, IRR Road ಮಾಡಿದ್ದೇವೆ, ನಾಲ್ಕು ಕಡೆ Township ಗಳನ್ನು ಮಾಡುತ್ತೇವೆ, ಇಷ್ಟು ಕೋಟಿ ರೂ.ಗಳು ಬೆಂಗಳೂರನ್ನು ಅಭಿವೃದ್ಧಿ ಮಾಡುವುದಕ್ಕಾಗಿ ವೆಚ್ಚವಾಗುತ್ತದೆ ಎಂದು ಹೇಳಿದರು. ಇವತ್ತಿನವರೆಗೂ ಕೇವಲ 20 ಪರ್ಸೆಂಟ್ ಭೂಮಿ ಮಾತ್ರ acquisition ಆಗಿರುವುದು. ಆದರೆ ಅದಕ್ಕೆ Budget allocation ಇಲ್ಲ. ಆದರೆ ನಾವು ತೀರ್ಮಾನ ಮಾಡಿದ್ದೇವೆ. ಮೊನ್ನೆ ತಾನೆ ಕೇಂದ್ರದ ರೈಲ್ವೆ ಸಚಿವರಾದ ಶ್ರೀಮತಿ ಮಮತಾ ಬ್ಯಾನರ್ಜಿಯವರು ರೈಲ್ವೆ ಬಜೆಟ್ ಮಂಡನೆ ಮಾಡಿದರು. ಆಂದ್ರಪ್ರದೇಶ್ ಮತ್ತು ಕರ್ನಾಟಕ ರಾಜ್ಯಕ್ಕೆ ಹೆಚ್ಚು ರೈಲ್ವೆ ಯೋಜನೆಗಳು ಬಂತು. ಆದರೆ ಇನ್ನೂ ಚರ್ಚೆ ಇದೆ. ರೈಲ್ವೆ ಬೋರ್ಡ್‌ನಿಂದ ಯೋಜನೆ ಕಾರ್ಯಗತಕ್ಕೆ ಚರ್ಚೆಯಾಗಲಿಲ್ಲ. ಅದಕ್ಕೆ ಅಪ್ರೂವಲ್ ಸಿಗಲಿಲ್ಲವೆಂದು. ಆದರೆ ಈ ರಾಜ್ಯದ participation ಬಗ್ಗೆ ನಾವು ಸಹಕಾರವನ್ನು ನೀಡುತ್ತೇವೆ, 50 ಪರ್ಸೆಂಟ್ ನಾವು ಕೊಡುತ್ತೇವೆ, ರೈಲ್ವೆ ಯೋಜನೆಗಳ ಬಗ್ಗೆ ಕರ್ನಾಟಕಕ್ಕೆ ಹೆಚ್ಚು ಒತ್ತನ್ನು ಕೊಡಬೇಕೆಂದು ಈ ರಾಜ್ಯದ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರವನ್ನು ಮತ್ತು ರೈಲ್ವೆ ಸಚಿವರಾದ ಶ್ರೀಮತಿ ಮಮತಾ ಬ್ಯಾನರ್ಜಿಯವರನ್ನು ಮತ್ತು ರೈಲ್ವೆ ರಾಜ್ಯ ಸಚಿವರಾದ ಶ್ರೀಯುತ ಕೆ.ಹೆಚ್.ಮುನಿಯಪ್ಪನವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದರಿಂದ ಕರ್ನಾಟಕಕ್ಕೆ ಹೆಚ್ಚು ರೈಲ್ವೆ ಯೋಜನೆಗಳು ಬಂತು. ಯಾರಿಂದ ಎಂದರೆ, ಈ ರಾಜ್ಯ ಸರ್ಕಾರದ ಮಾನ್ಯ ಯಡಿಯೂರಪ್ಪನವರ ಸಂಕಲ್ಪದಿಂದ. ಮಾನ್ಯ ಅಧ್ಯಕ್ಷರೆ, ಧೈರ್ಯ ಬೇಕು, ಕೇಂದ್ರದ ಯೋಜನೆಗಳನ್ನು ಯಾವ ರೀತಿ ಬಳಸಿಕೊಳ್ಳುತ್ತೇವೆ, ಕೇಂದ್ರದ ಯೋಜನೆಗಳು ಈ ರಾಜ್ಯಕ್ಕೆ ಬರುವುದಕ್ಕೆ ನಮ್ಮ ಪ್ರಾಮಾಣಿಕ ಪ್ರಯತ್ನ ಏನು, ಈ ರಾಜ್ಯದ ಮುಖ್ಯಮಂತ್ರಿಗಳ ಕಮಿಟ್‌ಮೆಂಟ್, ಈ ರಾಜ್ಯಕ್ಕೆ ಕೇಂದ್ರದ ಯೋಜನೆಗಳನ್ನು ತರುವುದೇ ಆಗಿತ್ತು. ಯಾವ ರೀತಿ ಆಂಧ್ರದಲ್ಲಿ ಕಾಂಗ್ರೆಸ್ ಸರ್ಕಾರವಿದೆಯೋ ಅವರಿಗೆ

ಯಾವ ರೀತಿಯಲ್ಲಿ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟರೋ ಅದೇ ಪ್ರಾಮುಖ್ಯತೆಯನ್ನು ಕರ್ನಾಟಕಕ್ಕೂ ಕೂಡ ಕೊಟ್ಟರು. ಇದು ಯಡಿಯೂರಪ್ಪನವರ ಒಂದು ಸಂಕಲ್ಪ. ಕೇಂದ್ರ ಸರ್ಕಾರಕ್ಕೆ ನಾನು ಈ ಸಂದರ್ಭದಲ್ಲಿ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಮಾನ್ಯ ಅಧ್ಯಕ್ಷರೆ, ನಾನೂ ಕೂಡ ಒಂದು ದಲಿತ ಕುಟುಂಬದಿಂದ ಬಂದವನು. 40, 50 ವರ್ಷದಿಂದ ಒಬ್ಬ ವಿದ್ಯಾರ್ಥಿ ಹಾಸ್ಟೆಲ್‌ನಲ್ಲಿದ್ದುಕೊಂಡು ವ್ಯಾಸಂಗ ಮಾಡಬೇಕಾದರೆ, 40 ರಿಂದ 50 ವರ್ಷದವರೆವಿಗೂ ಕೇವಲ 300 ರಿಂದ 400 ರೂಪಾಯಿಗಳನ್ನು ಅವನ ಊಟಕ್ಕಾಗಿ, ವಸತಿ ವ್ಯವಸ್ಥೆಗಾಗಿ, ಎಣ್ಣೆ, ಸೋಪು ಬಳಕೆಗಾಗಿ ಕೊಡಲಾಗುತ್ತಿತ್ತು. ಒಬ್ಬ ದಲಿತ ವಿದ್ಯಾರ್ಥಿಯ ಅವಶ್ಯಕತೆಗಳಿಗೆ ಅಗತ್ಯವಾಗಿ ಏನು ಅವಕಾಶಗಳನ್ನು ಕೊಡಬೇಕಾಗಿತ್ತೋ ಆ ಬಗ್ಗೆ ಹಿಂದಿನವರು ಯಾರೂ ಯೋಚನೆಯನ್ನು ಮಾಡಿರಲಿಲ್ಲ. ಆದರೆ ಮಾನ್ಯ ಯಡಿಯೂರಪ್ಪನವರು ಒಬ್ಬ ವಿದ್ಯಾರ್ಥಿಗೆ ಪ್ರತಿ ತಿಂಗಳು 600 ರಿಂದ 650 ರೂಪಾಯಿಗಳನ್ನು ಕೊಡಲು ತೀರ್ಮಾನ ತೆಗೆದುಕೊಂಡರು. ಅನೇಕ ವಿದ್ಯಾರ್ಥಿಗಳು ಹಾಸ್ಟೆಲ್‌ನಲ್ಲಿದ್ದುಕೊಂಡು ವ್ಯಾಸಂಗವನ್ನು ಮಾಡುತ್ತಾರೆ. ಬಹುಶ: ನಗರ ಪ್ರದೇಶಗಳಲ್ಲಿ ಹಾಸ್ಟೆಲ್‌ನಲ್ಲಿರುವ ಮಕ್ಕಳು ಬಹಳ ಕಡಿಮೆ. 5 ಸಾವಿರ ರೂ.ಗಳಿಗೆ, 2 ಸಾವಿರ ರೂ.ಗಳಿಗೆ ತಮ್ಮ ಮಕ್ಕಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಜೀತಕ್ಕೆ ಇಡುತ್ತಾರೆ. ಒಂದು ವರ್ಷಕ್ಕೆ 5 ಸಾವಿರ ರೂ.ಗಳು. ಪರಿಶಿಷ್ಟ ಜಾತಿಯ ಕುಟುಂಬಗಳಲ್ಲಿ 10 ವರ್ಷ, 15 ವರ್ಷ, 20 ವರ್ಷಗಳ ಕಾಲ ಕೇವಲ 5 ಸಾವಿರ ರೂ.ಗಳಿಗೋಸ್ಕರ ಜೀತಕ್ಕೆ ಇಡುತ್ತಿದ್ದರು. ಆ ರೀತಿಯ ದಲಿತ ಮಕ್ಕಳೂ ಕೂಡ ವ್ಯಾಸಂಗ ಮಾಡಬೇಕು, ಅವರ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡಬೇಕೆಂದು ಹೇಳಿ, ಯಾವುದೇ ದಲಿತ ವಿದ್ಯಾರ್ಥಿ 60 ಪರ್ಸೆಂಟ್ ಮಾರ್ಕ್ಸ್‌ಗಳನ್ನು ತೆಗೆದುಕೊಂಡು ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿದರೆ ಅಂಥವರಿಗೆ ಹತ್ತು ಸಾವಿರ ರೂಪಾಯಿ ಕೊಡುತ್ತೇವೆಂದು ಹೇಳಿದರು. ಯಾರೂ ಕೂಡ ಹಿಂದೆ ಈ ಬಗ್ಗೆ ಯೋಚನೆ ಮಾಡಿರಲಿಲ್ಲ. ಇದರಿಂದ ಏನಾಯಿತೆಂದರೆ ಜೀತಕ್ಕೆ ದಲಿತ ಮಕ್ಕಳನ್ನು ಇಡುವುದು ಕಡಿಮೆಯಾಯಿತು. ನನ್ನ ಮಗನಿಗೆ ಶಾಲೆಗೆ ಕಳುಹಿಸಿಕೊಟ್ಟು ಅವನು 60

ಪರ್ಸೆಂಟ್ ತೆಗೆದರೆ ಹತ್ತು ಸಾವಿರ ರೂ.ಗಳನ್ನು ಸರ್ಕಾರವೇ ಕೊಡುತ್ತದೆಯಾದ ಕಾರಣ ನನ್ನ ಮಗನನ್ನು ಏಕೆ ಜೀತಕ್ಕೆ ಇಡಬೇಕು ಎಂದು ದಲಿತ ಕುಟುಂಬದವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದಾರೆ. ಏಕೆ ಹಿಂದಿನ ಸರ್ಕಾರಗಳು ಈ ಬಗ್ಗೆ ಯೋಚನೆ ಮಾಡಿರಲಿಲ್ಲ? ಇನ್ನು ಮಹಿಳಾ ವಿದ್ಯಾರ್ಥಿನಿಯರಿಗಾಗಿ 23 ಕಿತ್ತೂರು ರಾಣಿ ಚೆನ್ನಮ್ಮ ವಸತಿ ಪ್ರೌಢಶಾಲೆಗಳನ್ನು ತೆರೆಯುವ ಬಗ್ಗೆ ತೀರ್ಮಾನವಾಯಿತು. ಬಹಳಷ್ಟು ಹಿಂದೆ ಚರ್ಚೆಯಾಗಿದೆ. ಸದನಕ್ಕೆ ಚರ್ಚೆಯಾಗುವುದು ಮಾತ್ರವಲ್ಲ, ಸಮಸ್ಯೆಗಳು ಬಂದಾಗ ಅವುಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಬೇಕು. ಯಾವುದೇ ಸರ್ಕಾರ ಬಂದಾಗ ಸಮಾಜದ ಕೆಲಸವನ್ನು, ರಾಜ್ಯದ ಅಭಿವೃದ್ಧಿ ಕೆಲಸಗಳನ್ನು ಮಾಡಲೇಬೇಕಾಗಿದೆ. ಯಾವ ರಾಜ್ಯ ಸರ್ಕಾರ, ಯಾವ ರಾಜಕೀಯ ಪಕ್ಷಗಳು ಮಾಡುವುದಿಲ್ಲವೋ ಅಂಥವರನ್ನು ಮತದಾರ ತಿರಸ್ಕಾರ ಮಾಡುತ್ತಾನೆ. ಆದರೆ ದಲಿತರ ಶಿಕ್ಷಣಕ್ಕೆ ಶೈಕ್ಷಣಿಕ ರಂಗದಲ್ಲಿ ಹೆಚ್ಚು ಒತ್ತನ್ನು ಯಡಿಯೂರಪ್ಪನವರ ಸರ್ಕಾರ ಕೊಟ್ಟಿದೆಯೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಜನಸ್ಪಂದನದ ಬಗ್ಗೆ ಹೇಳಬೇಕು. ಗ್ರಾಮಸಭೆಗಳು ಆಗಲಿಲ್ಲ. ಒಬ್ಬ ರೆವಿನ್ಯೂ ಇನ್ಸ್‌ಪೆಕ್ಟರ್‌ರವರನ್ನು ನೋಡಬೇಕಾದರೆ ಒಂದು ವಾರ ಹುಡುಕಬೇಕಾಗಿತ್ತು. ಒಬ್ಬ ತಹಶೀಲ್ದಾರ್ ಯಾವ ವಾರದಲ್ಲಿ ಎಷ್ಟು ಹೊತ್ತಿನಲ್ಲಿ ಕಛೇರಿಯಲ್ಲಿ ಇರುತ್ತಾನೆ, ಎಷ್ಟು ಹೊತ್ತು ಅವನಿಗಾಗಿ ಜನ ಕಾಯಬೇಕು, ಎಷ್ಟು ಹೊತ್ತು ಇನ್‌ಕಂ ಸರ್ಟಿಫಿಕೇಟ್‌ಗಾಗಿ ನೋಡಬೇಕು, ಎಷ್ಟು ಹೊತ್ತಿಗೆ ಖಾತೆ ಆಗಬೇಕು, ಹೀಗೆ ಇಂಥವುಗಳಿಗಾಗಿ ಜನರು 20 ರಿಂದ 30 ಕಿ.ಮೀ. ದೂರವಿರುವ ತಾಲ್ಲೂಕು ಕೇಂದ್ರಕ್ಕೆ ಬರಬೇಕಾಗಿತ್ತು. ಆದರೆ ಈಗ ಜನಸ್ಪಂದನ ಕಾರ್ಯಕ್ರಮದಿಂದಾಗಿ ಈಗ ತಹಶೀಲ್ದಾರ್‌ರವರೇ ಹಳ್ಳಿಗೆ ಹೋಗಿ ಕುಳಿತುಕೊಂಡು ಕೆಲಸ ಮಾಡುವಂತಾಗಿದೆ. ತಹಶೀಲ್ದಾರ್ ಹಳ್ಳಿಗೆ ಹೋಗಿ ಅಲ್ಲಿ ರೈತ ನೆಲದಲ್ಲಿ ಕುಳಿತುಕೊಂಡು ಪ್ರಶ್ನೆ ಮಾಡಿದರೆ ಸಾರ್ವಜನಿಕವಾಗಿಯೇ ಆ ರೈತನಿಗೆ ಸರಿಯಾದ ಉತ್ತರವನ್ನು ಕೊಡುವಂತೆ ವ್ಯವಸ್ಥೆ ಮಾಡಲಾಗಿದೆ. ಪರಿಹಾರವನ್ನೂ ಕೂಡ ಅಲ್ಲಿಯೇ ತಕ್ಷಣ ಕೊಡಬೇಕು. ಜನಸ್ಪಂದನ ಕಾರ್ಯಕ್ರಮವೆಂದರೆ ಕೇವಲ ಮೀಟಿಂಗ್ ಅಲ್ಲ.

ಮುಂದಿನ ಜನಸ್ಪಂದನ ಕಾರ್ಯಕ್ರಮಕ್ಕೆ ಹೋಗುವಾಗ ಆ ಹಿಂದಿನ ಜನಸ್ಪಂದನ ಕಾರ್ಯಕ್ರಮಕ್ಕೆ ಸಂಬಂಧಪಟ್ಟಂತೆ ಏನೇನು ಅರ್ಜಿಗಳನ್ನು ಪಡೆದಿದ್ದಾನೆ, ಸಮಸ್ಯೆಗಳು ಏನೇನು ಹೇಳಲಾಗಿತ್ತೋ ಆ ಸಮಸ್ಯೆಗಳಿಗೆ ಪರಿಹಾರವನ್ನು ಕೂಡ ಹೇಳಬೇಕಾಗುತ್ತದೆ. ಇದಾದ ಮೇಲೆ . . .-

ಶ್ರೀ ಟಿ.ಬಿ. ಜಯಚಂದ್ರ : ನಾರಾಯಣಸ್ವಾಮಿಯವರೆ, ಒಂದು ನಿಮಿಷ ಯೀಲ್ಡ್ ಆಗಿ. ತಾವು ಬಹಳ ಮುಖ್ಯವಾದ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೀರಿ. ರಾಜ್ಯಪಾಲರ ಭಾಷಣದಲ್ಲಿ ಅವರ ಬಾಯಿಂದ ಏನು ಹೇಳಿಸಲಾಗಿದೆಯೋ ಅದನ್ನು ನೀವು ಸಮರ್ಥನೆ ಮಾಡಬೇಕು, ಆ ರೀತಿಯಲ್ಲಿ ನೀವು ಸಮರ್ಥನೆಯನ್ನು ಮಾಡುತ್ತಿದ್ದೀರಿ. ಆದರೆ ವಸ್ತು ಸ್ಥಿತಿ ಮಾತ್ರ ಹೇಳಬೇಕೆಂದರೆ, ಈಗ ನೀವು ಪಟ್ಟಣ ಪ್ರದೇಶದಿಂದ ಬಂದವರು. ಅದರ ಪರಿಸ್ಥಿತಿಯೇ ಬೇರೆ ಇರುತ್ತದೆ. ಆದರೆ ಹಳ್ಳಿಗಾಡಿನ ಪರಿಸ್ಥಿತಿಯೇ ಬೇರೆ ಆಗಿರುತ್ತದೆ. ಬಹುಶ: ಜನಸ್ಪಂದನ ಕಾರ್ಯಕ್ರಮದ ಉದ್ದೇಶವೇನಿದೆ, ಅದು ಬಹಳ ಚೆನ್ನಾಗಿದೆ. ಆದರೆ ವಸ್ತುಸ್ಥಿತಿ ಅದು ನಡೆಯುತ್ತಿಲ್ಲ. ಕಾರಣ ಏನೆಂದರೆ, ಪ್ರತಿ ಶನಿವಾರ ಎಂದು ನೀವು ಹೇಳಿಬಿಟ್ಟಿದ್ದೀರಿ. ಶನಿವಾರ ಬೆಳಿಗ್ಗೆ ಅವರು ಬಂದು ಯಾವುದೋ ಕೆಲವು ಹಳ್ಳಿಗಳಿಗೆ ಹೋಗಿ 12.00 ಗಂಟೆಯಾಯಿತೆಂದರೆ ಎಂ.ಎಲ್.ಎ. ರವರು ಇರುತ್ತಾರೋ ಅಥವಾ ಇರುವುದಿಲ್ಲವೋ ಗೊತ್ತಿಲ್ಲ, ಇವರು ಮಾತ್ರ 12.00 ಗಂಟೆಗೆ ಬಿಟ್ಟವರು ಮತ್ತೆ ಇವರು ತಾಲ್ಲೂಕಿಗೆ ಹೋಗುವುದೇ ಸೋಮವಾರ ಮಧ್ಯಾಹ್ನ. ಇವತ್ತು ಏನಾಗಿದೆಯೆಂದರೆ ಸಂಧ್ಯಾ ಸುರಕ್ಷಾದಲ್ಲಿ 25, ಅಂಗವಿಕಲ ಫಲಾನುಭವಿಗಳು ಒಂದು ನಾಲ್ಕೈದು ಜನ, ಭಾಗ್ಯಲಕ್ಷಿ ಯೋಜನೆಯಲ್ಲಿ ಒಂದಿಬ್ಬರು ಮೂವರು ಹೀಗೆ ಒಟ್ಟಾರೆ 40 ರಿಂದ 50 ಫಲಾನುಭವಿಗಳಿಗೆ ಬೆನಿಫಿಟ್ ಕೊಡುವುದಕ್ಕೋಸ್ಕರ ಜನಸ್ಪಂದನ ಕಾರ್ಯಕ್ರಮವೆಂದು ಹೇಳಿದರೆ, ಆ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಸಮರ್ಥನೆ ಮಾಡಿಕೊಳ್ಳುವುದು ಎಂದು ಹೇಳಿದರೆ ನಿಮಗೆ ಗ್ರೌಂಡ್ ರಿಯಾಲಿಟಿ ಗೊತ್ತಿಲ್ಲವೆಂದಾಗುತ್ತದೆ. ದಯಮಾಡಿ ನಾನು ಏನು ಹೇಳುತ್ತೇನೆಂದರೆ ನೀವು ಜನಸ್ಪಂದನ ಕಾರ್ಯಕ್ರಮವನ್ನು ಮಾಡಿ. ಆದರೆ ತಿಂಗಳಿಗೆ ಒಂದು ಸಾರಿ ಮಾತ್ರ ಮಾಡಿ.

ವಾರಕ್ಕೊಂದು ಸಾರಿ ಮಾಡಿಕೊಂಡು ಕುಳಿತುಕೊಂಡರೆ ಅಧಿಕಾರಿಗಳಿಗೆ ಕೆಲಸ ಕಾರ್ಯವಿರುವುದಿಲ್ಲ. ಅವರು ಅವರ ಊರಿಗೆ ಹೋಗುವುದಕ್ಕೆ ದಾರಿ ಮಾಡಿಕೊಟ್ಟಂತಾಗುತ್ತದಷ್ಟೆ.. ನೀವು ತಿಂಗಳಿಗೆ ಒಂದು ಸಾರಿ ಮಾಡಿ. ಆಗ ಈ ಕಾರ್ಯಕ್ರಮ ಸರಿಯಾಗಿ ನಡೆಯುತ್ತದೆ. ಸಮಗ್ರವಾಗಿ ಮಾಡಿ. ಹೆಚ್ಚು ಫಲಾನುಭವಿಗಳನ್ನು ಗುರುತಿಸಿ.

ಶ್ರೀ ಸುರೇಶ್‌ಕುಮಾರ್ (ಕಾನೂನು ಸಚಿವರು) : ಮಾನ್ಯ ಜಯಚಂದ್ರರವರೆ, ನೀವೇ ಹೇಳಿದಂತೆ The spirit of the program ಬಹಳ ಚೆನ್ನಾಗಿದೆ. ಸರ್ಕಾರವನ್ನು ಜನರ ಬಳಿಗೆ ತೆಗೆದುಕೊಂಡು ಹೋಗಬೇಕು. ಜನರು ಆಫೀಸ್‌ಗಳಿಗೆ ಅಲೆಯುವುದು ಬೇಡವೆಂದು ಈ ರೀತಿ ಮಾಡುವುದು. ಆದುದರಿಂದ ನೀವು ಹೇಳುವುದನ್ನೂ ಕೂಡ ಗಮನದಲ್ಲಿಟ್ಟುಕೊಂಡು ಒಂದು ಸುಧಾರಣೆಯನ್ನು ಮಾಡೋಣ.

ಶ್ರೀ ಟಿ.ಬಿ. ಜಯಚಂದ್ರ : ಮಾಡಿದರೆ ಒಳ್ಳೆಯದು. ಈಗ ಏನಾಗುತ್ತಿದೆಯೆಂದರೆ ಎರಡು ದಿವಸ, ಮೂರು ದಿವಸ ಒಬ್ಬರೂ ಪತ್ತೆ ಇರುವುದಿಲ್ಲ.

ಛೇರ್ಮನ್ : ಕಾನೂನು ಸಚಿವರೆ, ಜನಸ್ಪಂದನ ಕಾರ್ಯಕ್ರಮದಲ್ಲಿ ಕಡ್ಡಾಯವಾಗಿ ಅಧಿಕಾರಿಗಳು ಇರುವ ರೀತಿಯಲ್ಲಿ ಮಾಡಬೇಕು. ಜನ ಸ್ಪಂದನ ಕಾರ್ಯಕ್ರಮದಲ್ಲಿ ಅಧಿಕಾರಿಗಳಂತು ಕಡ್ಡಾಯವಾಗಿ ಇರಲೇಬೇಕು. ಅನೇಕ ಸಂದರ್ಭಗಳಲ್ಲಿ ಅವರ ಗೈರು ಹಾಜರಿ ಕಾಣುತ್ತಿದೆ. ಜನಸ್ಪಂದನ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಬೇಕೆಂದರೆ ಕಟ್ಟುನಿಟ್ಟಾಗಿ ಜಾರಿಗೆ ತರಬೇಕು.

ಶ್ರೀ ಸುರೇಶ್‌ಕುಮಾರ್ : ಮಾನ್ಯ ಛೇರ್ಮನ್‌ರವರೆ, ಮಾನ್ಯ ಜಯಚಂದ್ರರವರು ಏನು ಹೇಳಿದ್ದಾರೆ, ಅದರಲ್ಲಿ ಸಾಕಷ್ಟು ಅರ್ಥವಿದೆ. ಪ್ರತಿ ವಾರ ಜನಸ್ಪಂದನ ಮಾಡಿದಾಗ ಅದರ ಪರಿಣಾಮ ನಿಜವಾಗಿಯೂ ಎಷ್ಟಾಗುತ್ತದೆ ಎಂಬುದನ್ನು ನೋಡಿಕೊಂಡು, ತಾವು ಹೇಳಿರುವುದು ಕೂಡ ನಿಜ, ಅಧಿಕಾರಿಗಳು ಇಲ್ಲದಿದ್ದರೆ ಆ ಕಾರ್ಯಕ್ರಮ ಯಶಸ್ವಿಯಾಗುವುದಿಲ್ಲ. ಅದನ್ನು ನಾನು ಒಪ್ಪುತ್ತೇನೆ.

ಶ್ರೀ ಎ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೆ, ಇನ್ನು ಐದು ನಿಮಿಷದಲ್ಲಿ ನಾನು ಮುಗಿಸುತ್ತೇನೆ.

(ಗೊಂದಲ)

ಶ್ರೀ ಇ. ತುಕಾರಾಂ : ನಮ್ಮ ಜಿಲ್ಲೆಯಲ್ಲಿ ಜನಸ್ಪಂದನ ನಡೆಯುತ್ತಿಲ್ಲ, stop ಮಾಡಿದ್ದಾರೆ.

ಶ್ರೀ ಎ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೇ, ನಮ್ಮ ಜಯಚಂದ್ರರವರು ಮಾತನಾಡಿರುವುದು ಸರಿಯಿದೆ. ಆದರೆ ...

(ಗೊಂದಲ)

ಶ್ರೀ ಇ. ತುಕಾರಾಂ : ನಾವು ಒಂದು ವಿಚಾರ ಗಮನಿಸಬಹುದು, ಇವತ್ತು ಯಾರದೋ ಒತ್ತಡ ಇದೆ ಎಂದು ಹೇಳಿ ನನ್ನ ಕ್ಷೇತ್ರದಲ್ಲಿ ಜನಸ್ಪಂದನ ಕಾರ್ಯಕ್ರಮವನ್ನು ಜುಲೈನಿಂದ stop ಮಾಡಿದ್ದಾರೆ. ಇವತ್ತು ಜನಸ್ಪಂದನ ಆಗುತ್ತಿಲ್ಲ, ಇದರ ಬಗ್ಗೆ ಸರ್ಕಾರ ಗಮನಿಸಬೇಕೆಂದು ಕೇಳುತ್ತಿದ್ದೇನೆ.

(ಗೊಂದಲ)

ಶ್ರೀ ರಾಮಣ್ಣ ಲಮಾಣಿ : ಬೇರೆ ಬೇರೆ ಇರಬಹುದು, ಹಳ್ಳಿಗಳಲ್ಲಿ ಬಹಳಷ್ಟು ಸಮಸ್ಯೆಗಳು ಬರುತ್ತಿವೆ.

ಶ್ರೀ ಕೆ.ಜಿ. ಕುಮಾರಸ್ವಾಮಿ : ಜನಸ್ಪಂದನ ಕಾರ್ಯಕ್ರಮ ಬಹಳ ಒಳ್ಳೆಯ ಕಾರ್ಯಕ್ರಮ. ಆದರೆ ಅಲ್ಲಿ ಅಧಿಕಾರಿಗಳು ಸರಿಯಾಗಿ ಸ್ಪಂದನೆ ಮಾಡುತ್ತಿಲ್ಲ, ಅಧಿಕಾರಿಗಳು ಸ್ಥಳಕ್ಕೆ ಬರುತ್ತಿಲ್ಲ. ಕೇವಲ ನಾಲ್ಕೈದು ಜನ ಅಧಿಕಾರಿಗಳು ಬರುತ್ತಾರೆ, ಉಳಿದಂತಹವರು ಬರುತ್ತಿಲ್ಲ. ಹೀಗಾಗಿ ಆ ಕಾರ್ಯಕ್ರಮ failure ಆಗಬಾರದು, ಅದು ಸರಿಯಾದ ರೀತಿಯಲ್ಲಿ ನಡೆಯಬೇಕು ಎಂದರೆ ಅಲ್ಲಿಗೆ ಎಲ್ಲಾ ಅಧಿಕಾರಿಗಳು ಬರುವ ಹಾಗೆ ಸರ್ಕಾರ ನೋಡಿಕೊಳ್ಳಬೇಕು.

ಛೇರ್ಮನ್ : ಈಗಾಗಲೇ ಕಾನೂನು ಸಚಿವರಿಗೆ ಸ್ಪಷ್ಟವಾಗಿ ಸೂಚನೆ ಕೊಡಲಾಗಿದೆ. ಅಧಿಕಾರಿಗಳು ಕಡ್ಡಾಯವಾಗಿ ಬರುವಂತಹ ನಿಟ್ಟಿನಲ್ಲಿ ಅವರು ಕ್ರಮ ಕೈಗೊಳ್ಳುತ್ತಾರೆನ್ನುವ ಆಶ್ವಾಸನೆ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಎ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೇ, ನಾನು ಐದು ನಿಮಿಷದಲ್ಲಿ ಮುಗಿಸುತ್ತೇನೆ.

ಛೇರ್ಮನ್ : ನಾರಾಯಣಸ್ವಾಮಿಯವರೇ, ನೀವು ತುಂಬಾ ಚೆನ್ನಾಗಿ ಮಾತನಾಡುತ್ತಿದ್ದೀರಿ. ಆದರೆ ಕಾಂಗ್ರೆಸ್ ಪಕ್ಷದ ಕಡೆಯಿಂದ ಒಂದು ವಿನಂತಿ ಬಂದಿದ್ದು, ಅವರಿಗೆ ಆರು ಗಂಟೆಗೆ ಪಕ್ಷದ ಮೀಟಿಂಗ್ ಇರುವುದರಿಂದ ಅದಕ್ಕೆ ಹೋಗಬೇಕೆಂದು ವಿನಂತಿ ಮಾಡುತ್ತಿದ್ದಾರೆ. ನಿಮ್ಮ ಭಾಷಣವನ್ನು ನಾಳೆ ಮುಂದುವರೆಸೋಣ.

ಶ್ರೀ ಎ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೆ, ಬೇಡ, ನಾನು ಐದು ನಿಮಿಷದಲ್ಲಿ ಮುಗಿಸಿಬಿಡುತ್ತೇನೆ. ಜನಸ್ಪಂದನ ಕಾರ್ಯಕ್ರಮ ಈ ವರ್ಷ ಪ್ರಾರಂಭವಾಗಿದೆ. ನಾವು ಶಾಸಕರ ಅಧ್ಯಕ್ಷತೆಯಲ್ಲಿ ತಾಲ್ಲೂಕಿನಲ್ಲಿ ಕೆಡಿಪಿ ಮೀಟಿಂಗ್ ಮಾಡುತ್ತೇವೆ. ಜಿಲ್ಲಾ ಕೆಡಿಪಿ ಮೀಟಿಂಗ್‌ನಲ್ಲಿ ತಾಲ್ಲೂಕು ಕೆಡಿಪಿ ಮೀಟಿಂಗ್ ವಿಚಾರ ರಿವ್ಯೂ ಆಗುತ್ತದೆಯೇ ಸಾರ್? ಜಿಲ್ಲಾ ಕೆಡಿಪಿ ಮೀಟಿಂಗ್‌ನಲ್ಲಿ, ತಾಲ್ಲೂಕು ಕೆಡಿಪಿ ಮೀಟಿಂಗ್‌ನಲ್ಲಿ ಏನಾಯಿತು ಎಂದು ಚರ್ಚೆಯಾಗಿದ್ದರೆ ಆಗ ಸಮಸ್ಯೆಗಳು ಇರುತ್ತಿರಲಿಲ್ಲ. ಮಾನ್ಯ ಕಾನೂನು ಮಂತ್ರಿಗಳು ಕಟ್ಟುನಿಟ್ಟಾಗಿ ಕೆಡಿಪಿ ಮತ್ತು ಜನಸ್ಪಂದನ ಸಭೆಯಲ್ಲಿ ಯಾರು absent ಆಗುತ್ತಾರೆ, ಅವನನ್ನು absent ಎಂದು ಮಾಡಬೇಕು ಮತ್ತು ಅಲ್ಲಿ absent ಎಂದು ಬರೆಯಬೇಕು, ಶಿಸ್ತುಕ್ರಮ ಕೈಗೊಳ್ಳುವುದಕ್ಕೆ recommend ಮಾಡಬೇಕೆಂದು ನಾನು ಹೇಳಿದ್ದೇನೆ. ನೈಸ್ ಬಗ್ಗೆ ಬಹಳಷ್ಟು ಚರ್ಚೆಯಾಗುತ್ತದೆ.

(ಗೊಂದಲ)

ಶ್ರೀ ಎ. ನಾರಾಯಣಸ್ವಾಮಿ : ನೈಸ್ ಬಗ್ಗೆ ಬಹಳಷ್ಟು ಚರ್ಚೆಯಾಗುತ್ತಿದೆ. ಬೀದಿಯಲ್ಲಿ ರಂಪಾಟವಾಗುತ್ತಿದೆ. ಈ ಸದನಕ್ಕೆ ಬಹಳಷ್ಟು ಜವಾಬ್ದಾರಿ ಇದೆ. ಈ ಸದನದಲ್ಲಿ ತೆಗೆದುಕೊಂಡ ತೀರ್ಮಾನಗಳಿಗೆ ಸಮಾಜ ಮನ್ನಣೆ ಮಾಡುತ್ತದೆ. ನೈಸ್ ವಿಚಾರದ ಬಗ್ಗೆ ಚರ್ಚೆ ಮಾಡಬೇಕಾದರೆ ಬಹುಶ: ಒಂದು ದಿನ ಬೇಕಾಗಬಹುದು. ಆದರೆ ಈಗ ತಾವು ಸಮಯ

ಇಲ್ಲವೆಂದು ಹೇಳುವುದರಿಂದ ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ಅಲ್ಲಿ ಎಕರೆಗೆ 10 ರೂಪಾಯಿ ದರದಲ್ಲಿ 5,688 ಎಕರೆ ಸರ್ಕಾರಿ ಜಮೀನನ್ನು ನೈಸ್ ಕಂಪನಿಗೆ ಕೊಟ್ಟಿದ್ದು, ನಮ್ಮ ಯಡಿಯೂರಪ್ಪನವರ ಸರ್ಕಾರ ಅಲ್ಲ. ಕೇವಲ ಹತ್ತು ರೂಪಾಯಿ ದರದಲ್ಲಿ ನಾವು ಕೊಟ್ಟಿಲ್ಲ. ದಿನನಿತ್ಯ ಪತ್ರಿಕೆಯಲ್ಲಿ ಹೇಳುತ್ತಿರುತ್ತಾರೆ, ಹತ್ತು ರೂಪಾಯಿ ಲೀಜ್‌ಗೆ ಕೊಟ್ಟಿರುವುದಕ್ಕೂ, ಹಸ್ತಾಂತರ ಮಾಡಿರುವುದಕ್ಕೂ ನಮ್ಮ ಯಡಿಯೂರಪ್ಪನವರ ಸರ್ಕಾರಕ್ಕೆ ಸಂಬಂಧ ಇಲ್ಲ. ಯಾವುದಾದರೂ ದಾಖಲೆ ಇದ್ದರೆ ತೋರಿಸಲಿ. ಕೆಐಎಡಿಬಿಗೆ ದಿ: 7.10.1999ರಲ್ಲಿ ಹಸ್ತಾಂತರವಾಗಿದ್ದು, ನೈಸ್ ಕಂಪನಿಗೆ ಸಹಿ ಹಾಕಿದ್ದು 23,846 ಎಕರೆ. 1998ರಲ್ಲಿ ಹಿಂದಿನ ಮುಖ್ಯಮಂತ್ರಿ ಕುಮಾರಸ್ವಾಮಿಯವರು ನೈಸ್ ಕಂಪನಿಗೆ 400ರಿಂದ 500 ಎಕರೆ ಹಸ್ತಾಂತರ ಮಾಡಿದ್ದು. ಆದರೆ ಮಾನ್ಯ ಯಡಿಯೂರಪ್ಪನವರು ಸುಪ್ರೀಂಕೋರ್ಟ್‌ನ ನಿರ್ದೇಶನದಂತೆ ಕೇವಲ 254 ಎಕರೆ ಕೊಟ್ಟಿರುವುದು. ನಾವು ಯಾವುದೇ ರೈತರ ಭೂಮಿಯನ್ನು ನೈಸ್ ಕಂಪನಿಗೆ ಕೊಟ್ಟಿಲ್ಲ. ಈ ರಾಜ್ಯದ ರೈತರ ಹಿತಾಸಕ್ತಿಯನ್ನು ಕಾಪಾಡುವ ಜವಾಬ್ದಾರಿ ಈ ಸರ್ಕಾರಕ್ಕೆ ಇದೆ. ಈ ವಿಚಾರದಲ್ಲಿ ಗೊಂದಲವಾಗದೆ ವಿರೋಧ ಪಕ್ಷದವರಲ್ಲಿ ಪ್ರಾರ್ಥನೆ ಮಾಡುತ್ತೇನೆ, ಈ ವಿಚಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ಒಂದು ದಿನ ಸಮಯ ನಿಗದಿಯಾಗಲಿ. ಮಾನ್ಯ ಅಧ್ಯಕ್ಷರೆ, ಇಡೀ ಕರ್ನಾಟಕದಲ್ಲಿ ರೈತರ ಭೂಮಿಯನ್ನು acquition ಮಾಡುವ ವಿಚಾರದಲ್ಲಿ ಹಾಗೂ ನೈಸ್ ಕಂಪನಿ ವಿಚಾರದಲ್ಲಿ ಒಂದು ಇಡೀ ದಿನ ಸಂಪೂರ್ಣವಾಗಿ ಚರ್ಚೆಯಾಗಬೇಕು. ಇಲ್ಲಿ ಯಾರು ತಪ್ಪು ಮಾಡಿದ್ದಾರೆ? ಯಾರು ರೈತರ ಪರವಾಗಿದ್ದಾರೆ? ರೈತರ ಭೂಮಿಯನ್ನು ಹತ್ತು ರೂಪಾಯಿಗೆ ಮಾರಾಟ ಮಾಡಿದವರು ಯಾರು? ಯಾರು ಶಾಮೀಲಾಗಿದ್ದಾರೆ ಎನ್ನುವುದು ಇಲ್ಲಿ ಚರ್ಚೆಯಾಗಲಿ. ಇಲ್ಲಿ ಚರ್ಚೆಯಾದಾಗ ಅದಕ್ಕೆ ಗಾಂಭೀರ್ಯತೆ ಬರುತ್ತದೆ. ಈ ಸಮಾಜದಲ್ಲಿ ಯಾರ್ಯಾರಿಗೆ ಗೌರವ ಇದೆ ಎನ್ನುವ ಬಗ್ಗೆ ಪ್ರಜ್ಞಾವಂತರಿಗೆ, ವಿದ್ಯಾವಂತರಿಗೆ, ಮಾಧ್ಯಮದವರಿಗೆ ಬೆಳಕನ್ನು ಚೆಲ್ಲುವ ಕಾರ್ಯಕ್ರಮವಾಗದೇ ಹೋದರೆ ಎಲ್ಲಾ ರಾಜಕೀಯ ಪಕ್ಷಗಳ ಬಗ್ಗೆ ನೈಸ್ ಕಂಪನಿ ಜೊತೆ ಕೈಗೂಡಿಸಿದ್ದಾರೆ,

ಅವ್ಯವಹಾರ ನಡೆದಿದೆ ಎಂದು ಅನುಮಾನ ಇದೆ. ನಾವು ತಲೆ ಎತ್ತಿಕೊಂಡು ಓಡಾಡಬೇಕು, ರಾಜಕೀಯ ಪಕ್ಷದಲ್ಲಿ ಒಬ್ಬ ಶಾಸಕನಾಗಿ, ರಾಜಕಾರಣಿಯಾಗಿ, ಭ್ರಷ್ಟಾಚಾರಕ್ಕೆ ನಾವು ವಿರುದ್ಧವಾಗಿದ್ದೇವೆ, ರೈತರ ಪರವಾಗಿ ನಾವು ಇದ್ದೇವೆ, ರೈತರಿಗೆ ಅನ್ಯಾಯವಾಗುವುದಕ್ಕೆ ನಾವು ಬಿಡುವುದಿಲ್ಲವೆನ್ನುವ ವಿಚಾರವನ್ನು ಈ ರಾಜ್ಯದ ಜನತೆಗೆ ಹೋಗಬೇಕಾದರೆ ಅದರ ಬಗ್ಗೆ ಇಲ್ಲಿ ಒಂದು ಚರ್ಚೆಯಾಗಬೇಕೆಂದು ಮನವಿಯನ್ನು ಮಾಡುತ್ತೇನೆ. ನನಗೆ ಮಾತನಾಡುವುದಕ್ಕೆ ಇನ್ನು ಬಹಳಷ್ಟು ವಿಚಾರಗಳು ಇದ್ದವು. ಅವುಗಳ ಬಗ್ಗೆ ಮುಂದಿನ ದಿನಗಳಲ್ಲಿ ಚರ್ಚೆಯನ್ನು ಮಾಡೋಣ. ನಾನು ಮತ್ತೊಮ್ಮೆ ಸವಿನಯವಾಗಿ ಪ್ರಾರ್ಥನೆ ಮಾಡುತ್ತೇನೆ. ಶಾಸಕ ಎಂದು ಹೇಳಿದರೆ percentage ಹೋಗುತ್ತದೆ, ಶಾಸಕ ಎಂದು ಹೇಳಿದರೆ transferಗೆ ಹಣ ಕೊಡಬೇಕು, ಶಾಸಕ ಎಂದು ಹೇಳಿದರೆ ಭ್ರಷ್ಟ, ರಾಜಕಾರಣಿ ಎಂದರೆ ಹಣದ ಹಿಂದೆ ಹೋಗುತ್ತಾನೆ, ಇವುಗಳೆಲ್ಲವನ್ನು ಹೋಗಲ್ಲಾಡಿಸುವಂತಹ ಪ್ರಯತ್ನ ನಮ್ಮ ಈ ಸದನದ ಗೌರವಯುತವಾದ ಎಲ್ಲಾ ಚುನಾಯಿತ ಸದಸ್ಯರಿಂದ ಆಗದೇ ಹೋದರೆ ಸದನದ ಗೌರವ ಕಡಿಮೆಯಾಗುತ್ತದೆ. ಇವತ್ತು ಬಹಳಷ್ಟು ಹಿರಿಯ ಸಮಾಜ ಸೇವಕರು ಇದ್ದಾರೆ. ಆ ಸಮಾಜ ಸೇವಕರ ಪ್ರವೇಶ ಈ ಸದನಕ್ಕೆ ಅವಶ್ಯಕತೆ ಇದೆ. ಮತ್ತೊಮ್ಮೆ ನನಗೆ ಮಾತನಾಡಲು ಅವಕಾಶ ನೀಡಿದಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ರಾಜ್ಯಪಾಲರ ಭಾಷಣವನ್ನು ಅನುಮೋದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಛೇರ್ಮನ್ : ಈಗ ಸದನವನ್ನು ನಾಳೆ ಬೆಳಿಗ್ಗೆ 10.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನದ ಕಲಾಪವು ಸಂಜೆ 6.00 ಗಂಟೆ 07 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ನಾಳೆ ಬೆಳಿಗ್ಗೆ ಎಂದರೆ ದಿನಾಂಕ: 04.03.2010ರಂದು ಬೆಳಿಗ್ಗೆ 10.00 ಗಂಟೆಗೆ ಸಮಾವೇಶಗೊಳ್ಳಲು ನಿಃಶ್ಚಯಿಸಿತು)